ಹೊಸ
ಭಕ್ತಿಗೀತೆಗಳು

ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮೀಜಿಯವರು
ವಾಣಿಜಯರಾಂ ಡಾ|| ರಾಜಕುಮಾರ
ಬಿ. ಕೆ. ಸುಮಿತ್ರಾ, ಕೆ. ವೀರಮಣಿ,
ಎಸ್. ಪಿ. ಬಾಲಸುಬ್ರಹ್ಮಣ್ಯಂ, ಬಿ. ಆರ್. ಛಾಯಾ
ವಿಷ್ಣು ನಾಯಕ್ ಪುತ್ತೂರ, ಬೆಂಗಳೂರ ಲತಾ
ಪಿ. ಬಿ. ಶ್ರೀನಿವಾಸ ಇವೆಲ್ಲರು ಹಾಡಿರುವ
ಹೊಸ ಭಕ್ತಿಗೀತೆಗಳು

ನೂತನ ಭಕ್ತಿ ಗೀತೆಗಳು

ದಾಸರ ಪದಗಳು ರಾಘವೇಂದ್ರ ಸ್ವಾಮಿ, ಶೃಂಗೇರಿಶಾರದಾಂಬೆ,
ಧರ್ಮಸ್ಥಳ ಮಂಜುನಾಥಸ್ವಾಮಿ, ಕೊಲ್ಲೂರ ಮೂಕಾಂಬಿಕೆ,
ಉಡುಪಿ ಕೃಷ್ಣ, ಶ್ರೀ ಮಾರುತಿ, ಅಯ್ಯಪ್ಪ ಸ್ವಾಮಿ,
ಎಡೆಯೂರ ಸಿದ್ಧಲಿಂಗೇಶ್ವರ, ಗೋಕರ್ಣ ಮಹಾಬಲೇಶ್ವರ.
ಚಾಮುಂಡೇಶ್ವರಿ, ಸುಬ್ರಹ್ಮಣ್ಯಂ ಸ್ವಾಮಿ ಹಾಗೂ
ಇತರ ಅನೇಕದೇವರ ಹೊಸ ಭಕ್ತಿಗೀತೆಗಳನ್ನು
ಇದರಲ್ಲಿ ಸಂಗ್ರಹಿಸಿದೆ.

Sri Vidya Bharathi
Book Centre,
Bharathi Street,
SRINGERI - 577 13

ಬಸವ ಪ್ರಕಾಶನ ಗದಗ-582101

ಬೆಲೆ.... 8-00

—: ಅನುಕ್ರಮಣಿಕೆ :—

೧) ಬಾರೋ ಗುರು ರಾಘವೇಂದ್ರ
೨) ಬಾರೋ ಬಾರೋ ಮನೆಗೆ ಶ್ರೀರಾಘವೇಂದ್ರ
೩) ತೂಗಿರೆ ರಾಯರ ತೂಗಿರೆ
೪) ಮಂತ್ರಾಲಯದೊಳು ರಾಜಿ ಪರಾರೆ
೫) ರಾಘವೇಂದ್ರರಾಯರ ಪಾದಾಂಬುಜ
೬) ಜಯ ಜಯ ಶ್ರೀ ರಾಘವೇಂದ್ರ

ವಿಧ್ಯಾಭೂಷಣ ತೀರ್ಥ ಸ್ವಾಮಿಜಿಯವರು ಹಾಡಿದ ದಾಸರ ಪದಗಳು

೭) ನಮ್ಮಮ್ಮ ಶಾರದೇ
೮) ಕಂಡೆ ನಾ ಗೋವಿಂದನ
೯) ಡಂಗುರವ ಸಾರಿ ಹರಿಯ
೧೦) ಘೋಂಗೊಳಲ ನೂದೂತ
೧೧) ಎಂದಿಗಾದರು
೧೨) ಬಾರಿ ಬಾರಿಗೆ
೧೩) ಮಧಕರವೃತಿ
೧೪) ಮುಂಗದ ಮನೆ
೧೫) ರಾಘವೇಂದ್ರ ಕೃಪಾಸಾಗರ
೧೬) ಪಿಳ್ಳಂಗೋವಿ ಚೆಲ್ವ ಕೃಷ್ಣನ
೧೭) ಮುರಳಿಮನೋಹರ
೧೮) ಕೊಳಲನೂದುತ ಬಂದ
೧೯) ಕಾಡ ಬೆಳದಿಂಗಳು
೨೦) ಜಗವ ಸುತ್ತಿಹುದೆಲ್ಲ
೨೧) ಏನೆ ಬೇಡಲಿ
೨೨) ಬಂದು ನಿಲ್ಲೋಕಣ್ಣ
೨೩) ಮಧುರಾನಾಥನು
೨೪) ಓ ಸಂಕಟದ ಸೆಲೆಯೇ
೨೫) ನಂದನಂದನ [illegible]

ಶ್ರೀ ಶ್ರೀ ಕೇಶವನಂದ ಭಾರತೀ ಸ್ವಾಮಿಜಿಯವರು ಹಾಡಿದ ಭಕ್ತಿಗೀತೆಗಳು

೨೭) ಶಂಕರತನಯ ಬಾರೊ ನೀ ಬೇಗದಿ
೨೮) ನಾಮವ ಮರೆಯದಿರೊ
೨೯) ಮುಸುರೇ ತೊಳೆಯಬೇಕು
೩೦) ನೀನೆ ದಯಾಳು ನಿರ್ಮಲಚಿತ್ತ ಗೋವಿಂದ
೩೧) ರಾಮದಾಸ ನೀನು ನಿನ್ನ ದಾಸನಾನು
೩೨) ಪಾಹಿ ಜಗದಂಬ ಪಾಹಿ ಜಗದಂಬ
೩೩) ಸದಾ ಎನ್ನ ನಾಲಿಗೆಯಲ್ಲಿ
೩೪) ಅನಂತೇಶ್ವರ ಚಂದ್ರಮೌಳೀಶ್ವರ
೩೫) ಪಾಲಿಸಮ್ಮ ಮುದ್ದು ಶಾರದೆ
೩೬) ಗುಮ್ಮನ ಕರೆಯದಿರೆ
೩೭) ಹೊನ್ನಿನಾ ತೇರಿನಲಿ ಬಾಸ್ಕರನು ಬರುತಿರುವಾ
೩೮) ತಾಯೇ ನೀನು ಬಂದಿಲ್ಲಿ ನೆಲಸಿ
೩೯) ಅಮ್ಮಾ ಎಂದು ಕೂಗಿದರೆ
೪೦) ಆನಂದ ಕಂಡೆ ನಾನಿಂದು
೪೧) ಆ–ನ–ನಾ ತರನಾ
೪೨) ನ ನಾ ನಾ ಕೃಷ್ಣಾ ಎನಬಾರದೆ
೪೩) ಹಾ....ಆ....ಅನುಗಾಲವು ಚಿಂತೆ
೪೪) ಆ....ಏನಾ....ಬರೆದೆಯೋ ಬ್ರಹ್ಮ
೪೫) ಹರಿ....ನಾ....ನಾನಾ....ತರರೀನಾ
೪೬) ನಿಂದಕರಿರಬೇಕು
೪೭) ಆರು ಹಿತವರು ನಿನಗೆ
೪೮) ಹೊಡಿ ನಗಾರಿ ಮೇಲೆ ಕೈಯ
೪೯) ಏನು ಮಾಡಿದರೇನು ಭಯ ಹಿಂಗದು
೫೦) ಮುರಳಿಗಾನ
೫೧) ಎಂಥ ಮಹಿಮೆ ನಿದೇಯದು ಈ ಮುರಳಿಲೀ
೫೨) ಮುರಳಿಯೋ ಮುರಳಿಯೋ

೫೩] ಗೋಪಾಲಕೃಷ್ಣನು ಬಂದಾ ನೋಡು
೫೪] ಏತಕೊ ಕೃಷ್ಣಾ ನನ್ನ ಮುರಳಿಯಂತೆ
೫೫] ವೇಣುಗಾನವೇ ಸಾಗಿಹುದು
೫೬] ಹಾಡು ನೀ ಓ ಮುರಳಿ
೫೭] ಹಾಡಿದ ಕೃಷ್ಣನು ಅಖಿಲ ಜಗವು
೫೮] ರಾಧಿಕಾ ರಾಧಿಕಾ ಕೃಷ್ಣಾ
೫೯] ಮಧುರವಾದ ನಿನ್ನ ಶುಭರೂಪ
೬೦] ವೃಂದಾವನದಲಿ ನಂದ ನಂದನನ
೬೧] ಶೃಂಗೇರಿ ಶಾರದೆಯ ಭಕ್ತಿಗೀತೆಗಳು
೬೨] ಶೃಂಗೇರಿ ಶಾರದಾಂಬೆ
೬೩] ಭವ್ಯ ಮೂರುತಿ
೬೪] ಎಷ್ಟು ಕರುಣೆಯೋ
೬೫] ವಂದೆ ಶ್ರೀ ಚಂದ್ರಶೇಖರ
೬೬] ಕೃಪಾಕರಯಂ
೬೭] ಜ್ಞಾನವ ನೀಡೆನಗೆ
೬೮] ಶರಣೆಂಬೆ ನಿನಗೆ
೬೯] ನಮ್ಮಮ್ಮ ಶಾರದೆ
೭೦] ಇವಳೇ ವೀಣಾ ಪಾಣಿ
೭೧] ಶಾರದೇ ನೀ ನೋಡದೆ
೭೨] ಎಂಥ ಅಂದ ಎಂಥ ಚಂದ
೭೩] ಏಕೆ ಈ ಮೌನ ತಾಯೇ
೭೪] ಹೇಗೆ ಬೇಡುವದು
೭೫] ನಮೋ ಮಂಜುನಾಥ
೭೬] ಇಂದು ನಿ ಒಲಿದೆಯಾ
೭೭] ಜಗದೀಶ್ವರ
೭೮] ವರದಾ ಸ್ವಾಮಿಯೇ
೭೯] ಢಂ ಢಂ

೮೦] ಪವಡಿಸು
೮೧] ಆರತಿ
೮೨] ದೇವ ದೇವನೆ
೮೩] ಜಯದೇವಿ ಮೂಕಾಂಬಿಕೆ
೮೪] ಎಲ್ಲಿಲ್ಲೂ ನೀನಿರುವೆ ಮೂಕಾಂಬಿಕೆ
೮೫] ಈ ಧಿವ್ಯ ಶ್ರೀ ಕ್ಷೇತ್ರ
೮೬] ಜಯ ಜಯಾ ಜಯಶ್ರೀ
೮೭] ಸೌಪರ್ಣಿಕಾ ನದಿಯ ಸುದಿಯಲ್ಲಿ
೮೮] ನೋಡಲು ಹೊರಟೆವು
೮೯] ಓಂಕಾರ ಸಾಕಾರ ಆಗಿ ಬಂತು
೯೦] ಮಾನಸ ಮಂದಿರೆ ಮಹಾದೇವಿ
೯೧] ಅಮ್ಮಾ ಎಂದು
೯೨] ಕೊಲ್ಲೂರಿನಲಿ ನೆಲಸಿ
೯೩] ನೋಡಿ ಬನ್ನಿರಿ
೯೪] ಕನಕನಿಗೊಲಿದಾ
೯೫] ಗೋಪಿಚಂದನಸೊಳಗಿಂದ
೯೬] ಶ್ರೀ ಕೃಷ್ಣನು ಒಲಿದ ಮಹಾಮಾಯಿಮಾ
೯೭] ಕಂಡು ಕಂಡು ನೀ ಎನ್ನ ಕೈ ಬಿಡುವುದೇ
೯೮] ಶೃಂಗಾರ ರೂಪನು ಷಣ್ಮುಖನು
೯೯] ಅರಸು ಜಯಿಸಿದ ಅಂದಗಾರ
೧೦೦] ನವಿಲನೇರಿ ಬಂದಾ ನಗುನಗುತಾ
೧೦೧] ಆದಿತ್ಯ ನುಡಿಸಿದನು ದ್ವಾದಶಾಕ್ಷ
೧೦೨] ಕಂದನಾ ಪೂಜೆ ಚಂದ
೧೦೩] ಉತ್ಸವಮ್ಮಾ
೧೦೪] ಏಳು ಸುಬ್ರಹ್ಮಣ್ಯಾ
೧೦೫] ಸುಂದರ ಮನೋಹರ

೧೦೬] ಸೇವಕನಾ ಮಾಡೊ
೧೦೭] ಆಂಜನೇಯಾ
೧೦೮] ಎಲ್ಲಿ ಹನುಮಾನೋ
೧೦೯] ಹನುಮನ ನೋಡದಿರಾ
೧೧೦] ಮಾಲೆ ಹಾಕ ಬನ್ನಿ
೧೧೧] ಶಬರಿ ಗಿರಿನಾಥ
೧೧೨] ಎಂಥಾ ಸುಂದರ ಸಂಭ್ರಮ
೧೧೩] ನಿರತ ಭಜನೆ ಮಾಡೊ
೧೧೪] ಪಂಪಾ ನದೀಯಲಿ
೧೧೫] ಸತ್ಯ ಶಿವ ಸುಂದರ
೧೧೬] ಗೋಕರ್ಣ ಸಾಮಾಹಾ ಕಾಶೀ
೧೧೭] ಇದು ಗೋಕರ್ಣದ ಪುರಾಣ ಕಥನ
೧೧೮] ನೋಡು ನೋಡು ಕಣ್ಣಾರೆ ನಿಂತಿಹಳು
೧೧೯] ಶರಣರ ಕಾಯೇ ಚಾಮುಂಡೇಶ್ವರಿ
೧೨೦] ಸಿದ್ದಲಿಂಗ ಸ್ವಾಮಿ ಧ್ಯಾನ
೧೨೧] ಸದ್ಗುರುವೇ ಸಿದ್ದೇಶ
೧೨೨] ಎಡೆಯೂರ ಸಿದ್ದಲಿಂಗ

ಬಾರೋ ಗುರು ರಾಘವೇಂದ್ರ

ಹಾಡಿದವರು : ಪಿ. ಸುಶೀಲಾ

ಬಾರೋ ಗುರು ರಾಘವೇಂದ್ರ ಬಾರಯ್ಯ ಬಾ ಬಾ
ಹಿಂದೆ ಮುಂದಿಲ್ಲೆನಗೆ ನೀ ಗತಿಯೆಂದು ನಂಬಿದೆ ನಿನ್ನ ಪಾದವ
ಬಂಧನವ ಬಿಡೆಸೆನ್ನ ಕರಪಿಡಿ ನಂದ ಕಂದ ಮುಕುಂದ ಬಂಧು ॥
ಸೇವಕನೆಲೋ ನಾನು ಧಾವಿಸಿ ಬಂದೆನು ಸೇವೆ ನೀಡಲೋ ನೀನು
ಸೇವಕನ ಸೇವೆಯನು ಸೇವಿಸಿ ಸೇವ್ಯ ಸೇವಕ ಭಾವವೀಯುತ
ತಾವುಗಾಣಿಸಿ ಪೊರೆಯೊ ಧರೆಯೊಳು ಪಾಪನಾತ್ಮಕ ಕಾವ ಕರುಣೆ ॥
ಕರೆದರೆ ಬರುವಿಯೆಂದು ಸಾರುವುದು ಡಂಗುರ
ತ್ವರಿತದಿ ಒದಗೊ ಬಂಧು
ಜರಿಯಬೇಡವೊ ಬರಿದೆ ನಿನ್ನ ವಿರಹ ತಾಳದೆ ಮನದಿ ಕೊರಗುವೆ
ಹರಿಯ ಸ್ಮರಣೆಯ ನಿರುತದಲಿ ಎನಗ್ಟರುಷದಲಿ
ನೀ ನಿರುತ ಕೊಡುತಲಿ
ನರಹರಿಪ್ರಿಯನೆ ಬಾ ಗುರುಶೇಷವಿಠಲನ ಕರುಣಾಪಾತ್ರನೆ ಬೇಗ ಬಾ
ಗುರುವರನೆ ಪರಪೋಷಿಸೆನ್ನನು ಮರೆಯದಿರ ತಾವಚರಣ
ಕೋಟೆಯಲಿರಿಸಿ
ಚರಣಾಂಬುಜವ ತೋರುತ ತ್ವರಿತದಲಿ ಓಡೋಡಿ ಬಾ ಬಾ ॥

ಬಾರೋ ನಮ್ಮ ಮನೆಗೆ ಶ್ರೀ ರಾಘವೇಂದ್ರ

ಹಾಡಿದವರು : ಪಿ. ಸುಶೀಲಾ

ಬಾರೋ ನಮ್ಮ ಮನೆಗೆ ಶ್ರೀ ರಾಘವೇಂದ್ರ
ಬಾರೋ ದುಃಖಾಪಹಾರ ಬಾರೋ ದುರಿತ ದೂರ
ಬಾರೈಯ್ಯ ಸನ್ಮಾರ್ಗ ದಾರಿ ತೋರುವ ಗುರು ॥
ಬಾಲ ಪ್ರಹ್ಲಾದನಾತ ಖೂಳ ಕಶ್ಯಪುವಿಗೆ
ಲೋಲ ಶ್ರೀ ನರಹರಿ ಕಾಲರೂಪ ತೋರ್ದ ॥
ವ್ಯಾಸ ನಿರ್ಮಿತ ಗ್ರಂಥ ಮಧ್ವಕೃತ ಭಾಷ್ಯವ
ಬೇಸರದೆ ಓದಿ [illegible] ॥

ಮಂತ್ರಗೃಹದಲಿ ನಿಂತ ಸಂತಿಯುವಂರ್ಯ
ಅಂತ ತಿಳಿಯದೊ ನೀ ಅಂತರದೊಳು
ಭೂತ ಪ್ರೇತಗಳ ಘಾತಿಸಿಬಿಡುವಂಥ
ಖ್ಯಾತಿಯುತ ಯತಿನಾಥಗೆ ಸ್ತುತಿಸುವೆ ॥
ಕುಷ್ಠ ರೋಗಾದಿಗಳ ನಷ್ಟ ಮಾಡುವಂಥ
ಅಷ್ಟ ಮಹಿಮೆಯುತ ಶ್ರೇಷ್ಠ ಮುನಿಯೇ ॥
ಕರೆದರೆ ಬರುವರೆಂಬೊ ಕೀರ್ತಿ ಕೇಳಿ ನಾ
ಕರೆದೆನೊ ಕರುಣದಿ ಕರವ ಪಿಡಿಯೊ
ಭಕ್ತವತ್ಸಲನೆಂಬ ಬಿರುದಿಂದಾವರಾ
ಸಕ್ತನ ಮೊರೆ ಕೇಳಿ ಮಧ್ವೇಶ ವಿಠಲದಾಸ ॥

ತೂಗಿರೆ ರಾಯರ ತೂಗಿರೆ

ಹಾಡಿದವರು : ಪಿ. ಸುಶೀಲಾ

ತೂಗಿರೆ ರಾಯರ ತೂಗಿರೆ ಗುರುಗಳ
ತೂಗಿರೆ ಯತಿಕುಲ ತಿಲಕರ
ತೂಗಿರೆ ಯೋಗೀಂದ್ರ ಕರಮಲ ಪೂಜ್ಯರ
ತೂಗಿರೆ ಗುರು ರಾಘವೇಂದ್ರ ॥
ಕಂದಣಮಯವಾದ ಚಂದಸ ತೊಟ್ಟಿಲೊಳಾ
ನಂದದಿ ಮಲಗ್ಯಾರೆ ತೂಗಿರೇ ॥
ನಂದನ ಕಂದ ಮುಕುಂದ ಗೋವಿಂದನ
ಅಂದದಿ ಭಜಿಪರ ತೂಗಿರೇ ॥
ಶುದ್ಧ ಸಂಕಲ್ಪದಿ ಬದ್ಧ ನಿಜಭಕ್ತರ
ಉದ್ಧಾರಮಾಳ್ಪರ ತೂಗಿರೇ
ಶುದ್ಧ ಸಂಕಲ್ಪದಿ ಬದ್ಧ ನಿಜಭಕ್ತರ
ಯೋಗಿಶವಂದ್ಯರ ತೂಗಿರೆ ॥
ಭಜಕ ಜನರು ತಮ್ಮ ಭಜನೆಯ ಮಾಡಲು
ನಿಜಗತಿಯಿಪ್ಪರ ತೂಗಿರೇ
ನಿಜಗುರು ಜಗನ್ನಾಥ ವಿಠಲನ ಪಾದ
ಭಜನೆಮಾಳ್ಪರು ತೂಗಿರೇ

ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ
ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮಿಜಿಯವರು ಹಾಡಿದ
ದೇವರ ನಾಮಗಳು

ನಮ್ಮಮ್ಮ ಶಾರದೆ ಉಮಾಮಹೇಶ್ವರಿ। ನಿಮ್ಮೊಳಗಿಹನ್ಯಾರಮ ॥ಪಲ್ಲ॥ ಕಮ್ಮಗೋಲನ ವೈರೆಸುತನಾದ ಸೊಂಡಿಲ । ಹೆಮ್ಮಯ್ಯ ಗಣನಾಥನೇ ॥ ಕಾಣಮ್ಮ ॥೧॥

ಮೋರೆ ಕಪ್ಪಿನ ಭಾವ ಮೊರದಗಲದ ಕಿವಿ । ಕೋರೆ ದಾಡೆಯನ್ಯಾರಮ್ಮ ॥ ಮೂರು ಕಣ್ಣಿನ ಸುತ ಮುರಿದಿಟ್ಟ ಚಂದ್ರನ । ಧೀರ ತಾ ಗಣನಾಥನೆ ॥ ಕಣಮ್ಮ ನಮ್ಮಮ್ಮ ॥೨॥

ಉಟ್ಟ ದಟ್ಟಿಯು ಬಿಗಿದುಟ್ಟ ಚಲ್ಲಣದಾ । ದಿಟ್ಟ ತಾನಿವನ್ಯಾರಮ ॥ ಪಟ್ಟದ ರಾಣಿ ಪಾರ್ವತಿಯ ಕುಮಾರನು। ಹೊಟ್ಟೆಯ ಗಣನಾಥನೆ ಕಣಮ್ಮ॥ ನಮ್ಮಮ್ಮ ॥೩॥

ರಾಶಿ ವಿದ್ಯೆಯ ಬಲ್ಲ ರಮಣಿ ಹುಬಲನೊಲ್ಲ॥ ಭಾಷಿಗನಿವನ್ಯಾರಮ್ಮ॥ ಲೇಸಾಗಿ ಜನರ ಸಲಹುವ ಕಾಗಿನೆಲೆಯಾದಿ । ಕೇಶವ ದಾಸ ಕಣೇ ಅಮ್ಮಯ್ಯ.॥ ನಮ್ಮಮ್ಮ ಶಾರದೆ ॥೪॥

ಕಂಡೆ ನಾ ಗೋವಿಂದನ । ಕಂಡೆ ನಾ ಗೋವಿಂದನ । ಗೋವಿಂದನ ಕಂಡೆ ನಾ ಗೋವಿಂದನ ॥ ಪುಂಡರೀಕಾಕ್ಷ ಪಾಂಡವಪಕ್ಷ ಕೃಷ್ಣನ । ಕಂಡೆ ನಾ ಗೋವಿಂದನ ॥

ಕೇಶವ ನಾರಾಯಣ ಶ್ರೀಕೃಷ್ಣನ । ವಾಸುದೇವ ಅಚ್ಯುತ ಅನಂತನ ॥ ಸಾಸಿರನಾಮದ ಶ್ರೀ ಹೃಷೀಕೇಶನ । ಶೇಷಶಯನ ನಮ್ಮ ವಸುದೇವಸುತನ ॥ ಕಂಡೆ ನಾ ॥

ಪುರುಷೋತ್ತಮ ನರಹರಿ ಶ್ರೀಕೃಷ್ಣನ । ಶರಣಾಗತ ಜನ ರಕ್ಷಕನ ॥ ಕರುಣಾಕರ ನಮ್ಮ ಪುರಂದರ ವಿಠಲನ। ನರೆ ನಂಬಿದನು ಬೇಲೂರ ಚೆನ್ನಿಗನ ॥ ಕಂಡೆ ನಾ

ಡಂಗುರವ ಸಾರಿ ಹರಿಯ ಪುಂಡರೀಕರೆಲ್ಲರೂ ! ಮಂಡಲಾಸ್ಯ ಪಾಂಡುರಂಗ ವಿಠಲ ಪರದೈವವೆಂದು । ಡಂಗುರವ ||

ಮೊದಲ ಜಾವದವಧಿ ಮಾಡಿ ನುಡಿವನಾಗಿ ಕೈಯ ಪಿಡಿದು ಬಿಡಪೆ ಘಳಾ ಘಳಾ ಎಂದು ಬಿಡಿದು ಚಾಪವಿಕ್ಕುವಾಗ || ಡಂಗುರವ ||

ಪರಿಯು ಮುಡಿದ ಹೂವಿಗಾಗಿ ಸ್ಥಾನದಲ್ಲಿ ತೊಟ್ಟು ಕೊಂಡು ಹರುಷದಿಂದ ಆಡಿ ಪಾಡಿ ಕುಣಿದು ಶಾಸ್ತ್ರ ಎನುತ || ಡಂಗುರವ ಇಂತು ಸಕಲ ಲೋಕಕ್ಕೆ ಲಕ್ಷ್ಮೀಕಾಂತನಲ್ಲದಿವೆಂದು ಸಂತತಂ ಭಜಿಸುತ್ತ ನಿಶ್ಚಿತ ಪುರಂದರ ವಿಠಲನೆಂದು || ಡಂಗುರವ ||

ಪೊಂಗೊಳಲನೂದುತಿಹ ಯದುಕುಲೋತ್ತುಂಗ ! ಪಿಂಗಳಾವಾಂಗನೆ ರಜತಶಾಭಾಂಗ || ಪೊಂಗೊಳಲ ||

ಸಲಿಲಚರ ಧರಾಧರನು ಇಳಾಧರೋಜ್ವಲನಿತ್ತ ಬಲಿಯ ಬೇಡಿದನು
ಯದುಕುಲದಿ ಜನಿಸಿ ! ಬಲಿದು ಕುಂಡಲ ಮುರಿದು
ಲಲನೆಯರ ಒಳನಾಗಿ । ಖೂಳರ ಸಂಬೋಧಿಸುತ ಚೆಲುವ ಹಯವೇರ್ದ ||
ವಾರಿಚರ ಕೂರ್ಮಾವತಾರ ಸೂಕರ ಶೂರ ಭಾಮಿನಿಯ
ನೀರಜಾಕ್ಷಿಯ ತಂದು ಲಾಲಿಸಿದ ವ್ರತವಳಿದು ಏರಿದನು
ಭವಭಕ್ತಿ ಪುರಂದರ ವಿಠಲ

ಎಂದಿಗಾದರು ನಿನ್ನ ಪಾದರವಿಂದವೇ ಗತಿ ಎಂದು ನಂಬಿದೆನೋ । ಬಂಧುಬಳಗವ ಬಿಟ್ಟು ಬಂದೆ ನಿನ್ನ ಮನೆಗಿಂದು । ಮಂದರಧರ ಗೋವಿಂದ ಪುರಂದರ ವಿಠಲನೇ ನೀ ಬಂಧು । ಅನ್ಯರೊಬ್ಬರ ಕಾಣೆ ಮನ್ನಿಸುವರೆನ್ನ ಆಪನ್ನ ರಕ್ಷಕನೆ ಪರಿಪಾಲಿಸೆ [illegible] ಶ್ರೀಪುರಂದರಸರಸನೆ ಬಂದಾ

ಬಾರಿ ಬಾರಿಗೆ ನಿನ್ನ ಚರಣಕ್ಕೆ ಶರಣೆಂಬೆ ! ಭಾರತೀರಮಣನೆ ಬಾರೊ ಮನೆಗಿಂದು ! ತಂದೆ ಶ್ರೀ ಪುರವರವಿತಲರಾಯನೆ ಎಂದೆಂದಿಗೂ ನೀನ್ತೆ ಜಗಕೆ ಬಂದು ॥

ಹಾಡಿದರೆ ಎನ್ನ ಒಡೆಯನ ಹಾಡುವೆ ! ಬೇಡಿದರೆ ಎನ್ನ ಒಡೆಯನ ಬೇಡುವೆ! ಒಡೆಯಗೆ ಒಡಲನು ತೋರುವ ಎನ್ನ ಬಡತನ ಬಿನ್ನಹ ಮಾಡುವೆ|| ಒಡೆಯ ಶ್ರೀ ಪುರಂದರವಿತಲರಾಯನ ಅಡಿಗಳನು ಸಾರಿ ಬದುಕುವೆ ||

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳು ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಾ ನಿಮಗೆಂಬ ||
ಸುಲಭನೋ ಹರಿ ತನ್ನವರನರೆ
ಗಳಿಗೆ ಬಿಟ್ಟಗಲನೋ ರಮಾಧವನ
ಒಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ ||

ಮಧುಕರವೃತ್ತಿ ಎನ್ನದು ! ಬಲು ಚೆನ್ನದು ಮಧುಕರವೃತ್ತಿ ಎನ್ನದು|| ಪದುಮನಾಭನ ಪಾದ ಪದುಮ ಮಧುಪವೆಂಬ ! ಮಧುಕರವೃತ್ತಿ ಎನ್ನದು ||

ಕಾಲಿಗೆಜ್ಜೆ ಕಟ್ಟಿ ! ನೀಲವರ್ಣನ ಗುಣ । ಆಲಾಪಿಸುತ್ತ ಬಲು || ಓಲಗ ಮಾಡುವಂಥ || ಮಧುಕರವೃತ್ತಿ ||

ರಂಗನಾಥನ ಗುಣ ! ಇಂಗದೆ ಪಾಡುತ್ತ ! ಶೃಂಗಾರ ನೋಡುತ್ತ !! ಕಂಗಳ ಆನಂದವೆಂಬ || ಮಧುಕರವೃತ್ತಿ ||

ಇಂದಿರಾಪತಿ । ಪುರಂದರವಿತಲನಲ್ಲಿ । ಚಂದ ಭಕ್ತಿಯಿಂದ ಆನಂದ ಪಡುವಂಥ || ಮಧುಕರವೃತ್ತಿ ||

ಮಂದಗಮನೆ ಇವನ್ಯಾರು ಪೇಳಮ್ಮ ! ಮಂದರಧರ ಗೋವಿಂದ ಕಣಮ್ಮ || ಚೆಂದಳಿಗ ಪೋಲ್ವ ಪದಪದ್ಮದಲ್ಲಿ! ಅಂದಿಗೆ ಇಟ್ಟವನು ಯಾರೆಂದು ಪೇಳಮ್ಮ । ಅಂದು ಕಾಳಿಂಗದ ಹೆಡೆಯ ತುಳಿದ ದಿಟ್ಟ ನಂದನ ಕಂದ ಮುಕುಂದ ಕಾಣಮ್ಮ || ಮಂದಗಮನೆ ||

ಕಂಬುಕಂಧರ ಕರ್ಣ ವಿಲಂಬಿತ ಕುಂಡಲ. ಅಂಬುಜಮುಖದವನ್ಯಾರೆಂದು ಪೇಳಮ್ಮ । ರಂಭೆ ಕೇಳಿ ಶ್ರೀ ಪುರಂದರವಿಠಲನು ! ನಂಬಿದ ಭಕ್ತಕುಟುಂಬಿ ಕಾಣಮ್ಮ || ಮಂದಗಮನೆ ||

ರಾಘವೇಂದ್ರ ಕೃಪಾಸಾಗರ ಶ್ರೀಗುರು ರಾಘವೇಂದ್ರ || ಪರಿಪಾಲಿಸೊ|| ರೋಗಹರನೆ ! ಕೃಪಾಸಾಗರ ಶ್ರೀ ಗುರು ರಾಘವೇಂದ್ರ || ಪರಿಪಾಲಿಸೊ || ಸಂತತ ದುರ್ಗತ ಧ್ವಾಂತದಿವಾಕರ ! ಸಂತಸದಿಂದ ಮಾತಲಾಲಿಸೊ ಪಾವನ ಗಾತ್ರ ದೇವ ವರನೆ ತವ ಸೇವಕ ಜನರೊಳಗಾಡಿಸೊ || ಘನ ಮಹಿಮ ಜಗನ್ನಾಥ ವಿಠಲಪ್ರಿಯ ದಿನ್ನಾರಾಧನೆ ಮಾಡಿಸೊ ||

ಪಿಳ್ಳಂಗೋವಿ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ ||ಎಲ್ಲಿ|| ಎಲ್ಲಿ ನೋಡಿದರಿಲ್ಲಿ ತಾನಿಲ್ಲದಿಲ್ಲವೆಂದು ಬಲ್ಲ ಜಾಣರೆ ||ಪಿಳ್ಳಂ|| ನಂದಗೋಪನ ಮಂದಿರಗಳ ಸಂದುಗೊಂದಿನಲಿ ! ಚಂದ ಚಂದದ ಗೋಪಬಾಲರ ವೃಂದ ವೃಂದದಲಿ|| ಸುದತಾಂಗದ ಸುಂದರಿಯರ ಹಿಂದುಮುಂದಿನಲಿ । ಅಂದವಾಕಳ ಕಂದಕರುಗಳ ಮುಂದೆಮುಂದೆಯಲಿ||ಈ ಚರಾಚರದೊಳಗೆ ಅಜಾಂಡದ ಆಚೆ ಈಚೆಯಲಿ ಖೇಚರೇಂದ್ರನ ಸುತನ ರಥದ ಅಚ್ಚ ಪೀಠದಲಿ ||

ನಾಚದೆ ಮಾಧವ ಕೇಶವನೆಂಬ ವಾಚಕಂಗಳಲಿ || ವೀಚುಕೊಂಡದ ಪುರಂದರವಿಠಲನ ಆಲೋಚನಾಗ್ರದಲಿ || ಪಿಳ್ಳಂಗೋವಿಯ ||

ಜಾರತ್ವವನು ಮಾಡಿದ ಪಾಪಗಳಿಗೆಲ್ಲಿ ! ಹೇ ಗೋಪೀಜನಜಾರ ಎಂದರೆ ಸಾಲದೇ || ಚೋರತ್ವವನು ಮಾಡಿದ ಪಾಪಗಳಿಗೆಲ್ಲ ಹೇ ನವನೀತ ಚೋರ ಎಂದರೆ ಸಾಲದೇ || ಕ್ರೂರತ್ವವನು ಮಾಡಿದ ಪಾಪಗಳಿಗೆಲ್ಲ ಹೇ ಮಾನವ ಕೊಂದವ ಎಂದರೆ ಸಾಲದೇ || ಪ್ರತಿದಿವಸ ಮಾಡಿದ ಪಾಪಗಳಿಗೆಲ್ಲ ಪತಿತ ಪಾವನ ಎಂದರೆ ಸಾಲದೇ || ಇಂತಿಪ್ಪ ಮಹಿಮೆಗಳನು ಒಂದನಾದರೂ ಒಮ್ಮೆ ಸಂತಸದಲ ನೆನೆಯುವವರ ಸಲಹುವವ ಶ್ರೀ ಕೃಷ್ಣ...... ಕೃಷ್ಣ ||

ಮುರಳಿಮನೋಹರ ನಂದಕುಮಾರ ! ಗೋವರ್ಧನ ಗಿರಿಧಾರಿ ||
ಗೋಪಾಲಕೃಷ್ಣ ಮುರಾರಿ ||
ಭಾಮಾ ರುಕ್ಮಿಣಿ ಹೃದಯ ವಿಹಾರ ! ಶ್ಯಾಮ ಸುಕುಮಾರ ದೇವ ಸುಧಾಕರ || ಮುರಳಿ ||

ಕಟಿಯಲ್ಲಿ ಕರವಿಟ್ಟನು । ಪಂಡರಿರಾಯ । ಕಟಿಯಲ್ಲಿ ಕರವಿಟ್ಟನು !

ರಾಜಸೂಯ ಯಾಗದಲ್ಲಿ ರಾಜೇಶ್ವರ ರಾಜರು ಮೊದಲಾದ ಸುರರೆಲ್ಲರು ಭೋಜನವನ್ನೆ ಮಾಡಿ ಎಂಜಲು ಮೊದಲಾಸು ! ರಾಜೀವಾಕ್ಷನು ಎತ್ತಿದಾಯಾಸದಿಂದ ! ಕಟಿಯಲ್ಲಿ ||

ಸುರಪತನಯಗೆ ಸಾರಥ್ಯವ ತಾ ಮಾಡಿ ! ಭರದಿಂದ ಚಕ್ರವ ಓಡಿದು ದಿಂದಲು ! ಪರಿಪರಿ ವಿಧದಿಂದ ಕುದುರೆಗಳ ತಾ ತೊಳೆದು ಪಸಿಪರಿ ಕೆಲಸದ ಆಯಾಸದಿಂದಲು ! ಕಟಿಯಲ್ಲಿ

ಮಮತೆಯಿಂದಲಿ ಭಕ್ತಜನರು ತನ್ನಯ ಚರಣಕಮಲ ಯುಗವನು ಭಜಿಸುತ್ತಲಿರಲು ! ಮಮತೆಯಿಂದಲಿ ಅವರ ಭವನ ಕಳೆವೆನೆಂದು ! ಕಮಲ ನಾಭ ಶ್ರೀ ಪುರಂದರವಿಠಲ ! ಕಟಿಯಲ್ಲಿ ||

ಕೊಳಲನೂದುತ ಬಂದ ! ಗೋಪಿಯ ಕಂದ । ಕೊಳಲನೂದುವುದು ಬಲುಚಂದ ! ಕೊಳಲನೂದುತ ಬಂದ ಆ ವಸುದೇವನ ಕಂದ ! ದೇವಕಿ ಬಸಿರೊಳು ಬಂದ ! ಮಾವ ಕಂಸನ ಕೊಂದ ! ಭಾವಜನಯ್ಯ ಮುಕುಂದ ! ಮುಂದೆ ಗೋವುಗಳ ಹಿಂಡು । ಹಿಂದೆ ಗೋಪಾಲರ ದಂಡು ! ಇಂಗದೆ ದೈತ್ಯರ ಕೊಂದ ! ಪುರಂದರವಿಠಲ ಚಂದ ||

ಕಾಡ ಬೆಳದಿಂಗಳು ! ಈ ಸಂಸಾರ ಕತ್ತಲೆ ಬೆಳದಿಂಗಳು । ಉಂಟಾದ ಕಾಲಕ್ಕೆ ನೆಂಟರು ಇಪ್ಪರು ! ಬಂಟರಾಗಿ ಬಂದು ಬಾಗಿಲ ಕಾಯ್ವರು ! ಉಂಟಾದತನ ತಪ್ಪಿ ಬಡತನ ಬಂದರೆ ! ಒಂಟೆಯಂತ ಕತ್ತಮೇಲೆತ್ತುವರು ! ಕಾಡ ಬೆಳದಿಂಗಳು !

ಏರುವ ದಂಡಿಗೆ ನೂರಾರು ಮಂದಿಯು ! ಮೂರು ದಿನದ ಭಾಗ್ಯ ಕ್ಷಣಕ್ಷಣವು ! ನೂರಾರು ಸಾವಿರ ದಂಡವ ತೆತ್ತರೆ ! ರಂಗ ವಿಠಲನ ನೆನೆಸರಿಯುಂಬರಯ್ಯ ! ಕಾಡಬೆಳದಿಂಗಳು ||

ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ ! ನಿನ್ನ ಸುತ್ತಿಹುದೆಲ್ಲ ಎನ್ನ ಮನವಯ್ಯ ! ಜಗಕೆ ಬಲ್ಲಿದ ನೀನು ! ನಿನಗೆ ಬಲ್ಲಿದ ನಾನು ! ಮೂರು ಜಗವು ನಿನ್ನೊಳಗೆ ! ನಿಂದು ಎನ್ನೊಳಗೆ । ಕರಿಯು ಕನ್ನಡಿಯಲ್ಲಿ ಅಡಗಿಪ್ಪ ತೆರನಂತೆ ಎನ್ನೊಳು ಅಡಗಿದೆಯೆ । ಪುರಂದರವಿಠಲ ।

ನಂದತನಯ ಗೋವಿಂದನ ಭಜಿಪುದಾನಂದದ ಮಿಠಾಯಿ ।
ಬಂಧುಗಳನು ಭವರೋಗಗಳೆಲ್ಲವನು । ನಿಂದಿಪುದೀ ಮಿಠಾಯಿ ।
[illegible] ಕಾರವಾದ ಮಿಠಾಯಿ।
ಕದಳಿ ದ್ರಾಕ್ಷಿ ಖರ್ಜೂರಗಳನು ಮೀರುವುದಿದುವೆ ಮಿಠಾಯಿ ।

ಪಂಚಭಕ್ಷ್ಯಗಳ ಷಡ್ರಸಾನ್ನಗಳ ಮಿಂಚಿದಂಥ ಮಿಠಾಯಿ ||
ಕುಬೇರನ ರಕ್ಷಿಸು ಎನ್ನುತಿರುವರ ಅಂಜಿಕೆ ಬಿಡಿಪ ಮಿಠಾಯಿ ||
ಜಪತಪಸಾಧನಗಳಿಗಿಂತಲು ಬಲು ಅಪರೂಪದ ಮಿಠಾಯಿ ||
ಸಿಪ್ರರಾಷಮತಿಗಳಿಗೆ ಸಾಧ್ಯವಿಲ್ಲದಿಹ ಪುರಂದರವಿಠಲ ಮಿಠಾಯಿ ||

ಲೋಕಭರಿತನೊ ರಂಗಾನೇಕಚರಿತನೊ || ಕಾಕು ಜನರ ತರೆದುತನ್ನ
ಏಕಾಂತ ಭಕ್ತರ ಪೊರೆವ ಕೃಷ್ಣ || ಲೋಕ ||
ರಾಜಸೂಯ ಯಾಗದಲ್ಲಿ ರಾಜರಾಜರಿರಲು ಧರ್ಮ ರಾಜಸೂತನು
ಈತನ ಸಭಾ || ಪೂಜೆಗರ್ಹನೆನಿಸಿದಾತ || ಲೋಕಭರಿತನೊ ||
ತನ್ನ ಸೇವಕ ಜನರ ಪೊರೆದು || ಉನ್ನತುಡುಪಾಯಲ್ಲಿ ನಿಂದು । ಘನ್ನ
ಮಹಿಮೆಯಿಂದ ಮೆರೆವ ! ಪ್ರಸನ್ನ ಹಯವದನ ಕೃಷ್ಣ || ಲೋಕ ||

ಏನ ಬೇಡಲಿ ನಿನ್ನ ಬಳಿಗೆ ಬಂದು । ಮೌನದಿಂ ಸಲಹಯ್ಯ ಗುರು
ರಾಘವೇಂದ್ರ । ಮಾನ ಹೊಲೆಗಲಿಸಿತು । ಮನವು ಮೈಲಿಗೆ ಯಾಯ್ತು ।
ನೆನೆಯಬಾರದು ಎನ್ನ ಬಯಸುವರು ಕೇಳೊ । ಅನುಭವಿಸಲಾರೆನು ಅದರ
ಕಾಟಗಳನ್ನು । ಉಬ್ಬಸವನ್ನು ಯಾರಲ್ಲಿ ಪೇಳುವೆನು ||
ಒಂದು ಕ್ಷಣವಾದರು ಹರಿಯ ನೆನೆವೆನಲು । ಒಂದಲ್ಲ ಎರಡಲ್ಲ ಹಲವು
ತಾಪತ್ರಯಗಳು । ತಂದೆ ಪುರಂದರವಿಠಲ ಸ್ಥಿತಿವಂತನೆ ಒಂದುಪಾಯವ
ನೀನು ಪೇಳಬಾರದೆ ಎನಗೆ ||
ಲಂಗೋಟಿ ಬಲು ಒಳ್ಳೇದಣ್ಣ । ಒಬ್ಬ ಹಂಗಿಲ್ಲದೆ ಮಡಿಗೆ ಒದಗುವ
ದಣ್ಣ । ಲಂ । ಬಡವರಿಗಾಧಾರ ಒಂಧಾಗಿ ಲಂಗೋಟಿ । ವೈರಾಗಿಗಳ ಭಾಗ್ಯ
ವಣ್ಣ । ಲಂ । ಕಡುಗಳ್ಳರಿಗೆ ಗಂಡ ಮಡಿಕೊಟ್ಟಗಳ ಮಿಂಡ ! ನಡಾಗುವ
ಸಮಯಕ್ಕೆ ಮಡಿಕೆ [illegible] || ಲಂ ||

ಹಿತಮನ ಸನ್ಯಾಸಿಗಳಿಗೆ ಕೌಪೀನ । ವ್ರತವುಳ್ಳ ಬ್ರಹ್ಮಚಾರಿಗೆ ಮುಖ್ಯವು । ಅತಿಶಯವಿದೆ ಆಂಜನೇಯ ನಾರದರಿಗೆ । ಗತಿ ಇಲ್ಲದವರಿಗೆ ಹಿತವಾಗಿ ಇರುವಂಥ ॥ ಮಡಿವಾಳರಿಗೆ ಶತ್ರು । ಮಠದಯ್ಯಗಳ ಮಿತ್ರ । ಪೊಡವಿಯೊಳ್ ಯಾಚಕರಿಗೆ ನೆರವು । ದೃಢಭಕ್ತ ಬಲಿಚಕ್ರವರ್ತಿಗಾಗಿ ಎಮ್ಮ ಒಡೆಯ ಶ್ರೀ ಪುರಂದರ ವಿಠಲ ಧರಿಸಿದಂಥ ॥ ೮೦ ॥

ಬಂದು ನಿಲ್ಲೋಕಣ್ಣ ಮುಂದೆ । ಬಂದು ನಿಲ್ಲೋ । ಬಂದು ನಿಲ್ಲೋ ನಿನ್ನ ಪಾದಕ್ಕೆ ವಂದಿಪೆ । ಇಂದಿರೆಯರಸ ಗೋವಿಂದ ಮುಕುಂದನೆ ॥ ಬಂ ॥ ಅರಳಿದ ಕೆಂದಾವರೆಯ ಧಿಕ್ಕರಿಸುವ । ಚರಣಾರವಿಂದವ ನಿರತ ತೋರಿಸುತ ॥ ನೀಲಾಲಕ ಮಕರಕುಂಡಲ ಮಂಡಿತ ! ಮೇಲಾದ ಶಾರದೇಂದು ಮುಖ ತೋರುತಲಿ ॥ ಬಂದು ॥ ಪದುಮನಾಭನೆ ನಿನ್ನ ಸದಯ ಎನ್ನುತೆ ಎನ್ನ ! ಹೃದಯದೊಳಗೆ ಇಟ್ಟು ಮುದದಿ ಭಜನೆ ಮಾಳ್ಪೆ ! ಅಜಭವಾದಿಗಳಿಗೆ ನಿಜವ ತೋರುವಂಥ ! ಭಜಿಪ ಭಕ್ತರಿಗೊಡೆಯ ವಿಜಯ ವಿಠಲ ರಂಗ ॥ ಬಂದು ॥

ಮಥುರಾನಾಥನು ಮುರಳಿಯನೂದಲು ! ಸುರಿವುದಾನಂದ ಜಲ !! ನಯನದಲಿ । ಬನ್ನಿರಿ ಮುರಳಿಯ ನಾದವ ಕೇಳಿ ! ಕಂಗೊಳಿಸುವ ಬೆಳದಿಂಗಳ ಸೊಬಗಿಲಿ ! ತಂಗಾಳಿಯ ಸುಖದಿ ಶ್ರೀರಂಗನ ! ಶ್ಯಾಮಲಾಂಗನು ತನ್ನ ಕೋಮಲ ಕರದಲಿ ! ಆ ಮುರುಳಿಯ ಪಿಡಿಯೆ ಹೃದಯದಲ್ಲಿ ! ಪ್ರೇಮವು ತುಂಬುವುದು ! ಬನ್ನಿ ಮುರಳಿಯ ನಾದವ ಕೇಳಿ ! ಪಂಚಬಾಣನ ಪಿತ ಮುರಳಿಯ ಮಧುರಸ ! ಹಂಚಲೆಮಗೆ ರೋಮಾಂಚವಾಗುವುದು ! ರಜನೀಕಾಂತನ ಕುಲದಲಿ ಜನಿಸಿ ! ಭಜಜಗಧಿತಕ ಪ್ರಸನ್ನನ ! ಮುರಳಿಯ ನಾದವ ಕೇಳಿ !!

ಓ ಸಂಕಟದ ಸೆಲೆಯೋ ಬಿಡುಗಡೆಯ ನೀವವನೆ ! ಓ ಅರಳು ತಾವರೆಯು ಕಂಗಳವನೆ !

ಆನಂದತೀರ್ಥರಿನೆ ತುಂಬು ಸಂತಸವೆಂಬ ವರವಿತ್ತ ದೈವತ್ತವೆ ನಿನಗೆ
ನಮನಂ !

ಚಂದಿರನ ಪೊತ್ತಿರುವ ನವಲಸೋಗೆಯು ತೊಟ್ಟು ! ಜಗಕೆ ಸಂತವೀವ ನಿನಗೆ ನಮನಂ ॥ ಆ ॥

ಬಗೆಯ ಸುಂದರಿಯನ್ನು ಎದೆಯಲ್ಲಿ ಹೊತ್ತವನೆ ಓ ಗೋಂದನೆ ನಿನಗೆ ನಮನಂ !

ಬಗೆಯ ಬೆಳಗುವ ಚಂದ್ರ ! ಜಗವನಾಳುವ ಇಂದ್ರ ! ಇವರಿಂದ ವಂದಿತನೆ ನಿನನಗೆ ನಮನಂ ॥ ಆ ॥

ಮಂದಾರದರಳುಗಳು ಚೆಲ್ಲಿ ಪರಿಮಳಿಸುತಿಹ ಮಂದಿರದಲಿರುವವನೆ ನಿನಗೆ ನಮನಂ ॥ ಆ ॥

ಸಂತಸದ ಹೊನಲೆಂಬ ಚೆಲುವ ಬೆಳದಿಂಗಳನು ನಮ್ಮೆಡೆಗೆ ಹರಿಯಿಸುವ ನಿನಗೆ ನಮನಂ ॥ ಆ ॥

ನಂದನಂದನ ಶ್ಯಾಮಸುಂದರೆ ಶುಭಕಾಯ
ಇಂದೀವರಾಕ್ಷ ಮುಕುಂದ ಮುರಾ ॥ ॥
ಮಂ[illegible]

ಶ್ರೀ ಎಡನೀರು ಮಠಾಧೀಶ
ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿಯವರು
ಹಾಡಿದ-ಭಕ್ತಿಗೀತೆಗಳು

ಶಂಕರತನಯ ಬಾರೋ ನೀ ಬೇಗದಿ ।
ಪಂಕಜಲೋಚನೆ ತೋರೊ ನೀ ದಯವ ।।ಪಲ್ಲ।।

ಭಕ್ತರ ಹೃದಯದ ನಿತ್ಯಪ್ರಕಾಶ ।
ರಕ್ತಾಂಬರಧರ ವಿಘ್ನವಿನಾಶಕ ।। ೧ ।।

ಮಂಗಲಮೂರುತಿ ಈಶ್ವರ !
ಸಂಗರಹಿತ ಪುರುಷೋತ್ತಮ ಸುಂದರ ।। ೨ ।।

ಸಲ್ಲಿಸು ಮನದಾಸೆಗಳ ಉದಾರ ।
ಮಲ್ಲಿನಾಥಪುರ ಗಿರಿಜಾಕುಮಾರ ।। ೩ ।।

ನಾಮವ ಮರೆಯದಿರೋ । ಶ್ರೀಕೃಷ್ಣನ ।
ನಾಮವ ಮರೆಯದಿರೋ ।।

ಬೇಡಿದ ವರವನು ನೀಡುವ ಸ್ವಾಮಿಯ ।
ಆಡುವ ಬಾಲರ ಕೂಡುತಲಾಡುವ ।
ಪಾಡುವ ಗಾನವನಾಲಿಸಿ ಕೇಳುವ ।
ಜೋಡಿಪ ಕರಗಳಿಗಭಯದಾಯಕನ ।। ೧ ।।

ಕರುಣಾಮಯನ ಗಾನವಿನೋದನ ।
ಶರಣಾಗತಜನ ಪಾಲಕನ ।
ಮುರಳೀಲೋಲನ ಮುರಹನ ।
ಪರಮೋದಾರನ ಶ್ರೀಗಿರಿಧರನೆ ।। ೨ ।।

ಯತಿವರ ಪೂಜ್ಯ ಸುಮುಕುತಿಪ್ರದಾತನ |
ಕಥಾನಾಟಕ ಮತಿಕಾರಕನ !
ಸತತ ಭಕ್ತ ಜನಸೇವ್ಯ ಸುರೇಶನ !
ಪತಿಪಾವನ ಎಡನೀರೊಡೆಯನೆ ||೩||

ಮುಸುರೆ ತೊಳೆಯಬೇಕು ! ಈ ಮನಸಿನ !
ಮುಸುರೆ ತೊಳೆಯಬೇಕು ॥ಪಲ್ಲ॥

ಮುಸುರೆ ತೊಳೆಯಬೇಕು ! ಗುಸುಗುಸು ಬಿಡಬೇಕು
ಈಶಪ್ರೇರಣೆಯೆಂಬೋ ! ಹಸಿಯ ಹುಲ್ಲನ್ನು ಹಾಕಿ

ಅಷ್ಟಮದದಿಂದ ಸುಟ್ಟು ಈ ಪಾತ್ರೆಯ
ವಿಷ್ಣು ನಾಮವೆಂಬೋ ಕೃಷ್ಣಾನದಿಯಲ್ಲಿ ||೧||

ಕಾಮಕ್ರೋಧದಿಂದ ಬೆಂದ ಈ ಪಾತ್ರೆಯ ।
ರಾಮಕೃಷ್ಣರೆಂಬೋ ಹೇಮಾನದಿಯಲ್ಲಿ ||೨||

ವಿಷವೆಂಬೋ ಪಾತ್ರೆಯ ಮುಸುರೆಯ ತೊಳೆದಿಟ್ಟು !
ಬಿಸಜಾಕ್ಷ ಪುರಂದರವಿಠಲಗರ್ಪಿಸೊ ನಿತ್ಯ ||೩||

ನೀನೆ ದಯಾಳು ನಿರ್ಮಲಚಿತ್ತ ಗೋವಿಂದ
ನಿಗಮಗೋಚರ ಮುಕುಂದ ॥ ಪ ॥

ಜ್ಞಾನಿಗಳರಸ ನೀನಲ್ಲದೆ ಜಗಕಿನ್ನು
ಮಾನದಿಂದಲಿ ಕಾಯ್ವ ತೊರೆಗಳ ನಾ ಕಾಣೆ

ದಾನವಾತಂಕ ದೀನಜನಮಂತಾರನೆ !
ಧ್ಯಾನಿಪರ ಮನಸಂಚಾರನೆ !
ಮೌನವಾದೆನು ನಿನ್ನ ಧ್ಯಾನಾನಂದದಿ ಈಗ !
ಸಾನುರಾಗದಿ ಕಾಯೊ ಸನಕಾದಿವಂದ್ಯನೆ ॥೧||

ಬಗೆಬಗೆಯಲಿ ನಿನ್ನ ನುತಿಪೆನೆ ನಗಧರ ।
ಖಗಪತಿವಾಹನನೆ !
ಮಗುನನ ಮಾನೆಂದು ನಗುತ ಕೇಳಿ ನೀನು ।
ಬೇಗದಿಂದಲಿ ಕಾಯೊ ಸಾಗರಶಯನನೆ ॥ ೨ ॥

ಮಂದರಧರ ಅರವಿಂದಲೋಚನ ನಿನ್ನ
ಕಂದನೆಂದೆಣಿಸೊ ಎನ್ನ ॥
ಸಂದೇಹವೇಕಿನ್ನು ಸ್ವಾಮಿ ಮುಕುಂದನೆ ।
ಬಂದೆನ್ನ ಕಾಯೂ ಶ್ರೀ ಪುರಂದರವಿಠಲನೆ ॥ ೩ ॥

ರಾಮದಾಸ ನೀನು। ನಿನ್ನ ದಾಸ ನಾನು ॥ ಜಗದ ಜನಕೆ ರಾಮನಾಮ
ಅಮೃತವನ್ನು ನೀಡಿದಂಥ ! ಪರಮಜ್ಞಾನಿ ನೀನು ॥೧॥

ತ್ಯಾಗದಿಂದ ಭೋಗವನ್ನು । ತೃಣದ ತೆರದಿ ಕಂಡಿರುವಂಥ ವೀರ
ತ್ಯಾಗಿ ನೀನು ॥೨॥ ।।೨।।

ಜನಕಜೆಯನರಸಲೆಂದು । ವನಧಿಯನ್ನು ಲಂಘಿಸಿದ । ಧೀರ ಹನುಮ
ನೀನು ।।೩।।

ಮಾತೆ ಸೀತೆಯಿಂದ ಚೂಡಾ ! ಮಣಿಯ ಬೇಡಿ ರಾಮಗಿತ್ತ ಕರ್ಮ
ಶೂರ ನೀನು ।।೪।।

ದುರುಳೆಯಾದ ಲಂಕಿಣಿಯನು ! ಲಂಕೆಯಲ್ಲಿ ಮಥಿಸಿದಂಥ ।
ಆಂಜನೇಯ ನೀನು ।।೫।।

ಭಕ್ತಜನರ ಇಷ್ಟಾರ್ಥವನು ! ಸಲಿಸೆ ರಾಮಪಾದದಲ್ಲಿ ! ನಿಂತ
ದೇವ ನೀನು ! ಹನು ! ಮಂತ ದೇವ ನೀನು ॥

ಪಾಹಿ ಜಗದಂಬ! ಪಾಹಿ ಜಗದಂಬ!! ಅಂಬ.... ಅಂಬ.... ಅಂಬ!!
ಪರಬ್ರಹ್ಮರೂಪಿಣೀ ಪರಮೇಶಪ್ರಿಯೆ ನೀ !
ಪಾಹಿ ಜಗದಂಬ !

ದುರಿತನಿವಾರಿಣಿ ! ಅಭಯಪ್ರದಾಯಿನಿ !
ಓಂಕಾರನಾದಸ್ವರೂಪಿಣಿ ||
ಗಣಪತಿಮಾತೆ ! ಸುಜನಸುಪ್ರೀತೆ |
ಅನವರತವು ಎಮ್ಮ ಪೊರೆ ಜಗನ್ಮಾತೆ || ಪಾಹಿ ||

ಕಲಿಯುಗದಲಿ ನಿನ್ನ ಮಹಿಮೆಯ ಪೊಗಳಲು !
ಸುಲಭವಲ್ಲವು ಮಾಯೆ ಮಾನವರಸನಗೆ || ಪಾಹಿ ||
ಅಜಪುರವಾಸಿನಿ ಕುಜನಕುತಾರಿಣಿ |
ವಿಜಯವ ಕರುಣಿಸು ಸುಜನಸುಪೋಷಿಣಿ || ೩ ||

ಸದಾ ಎನ್ನ ನಾಲಿಗೆಯಲ್ಲಿ ! ಬರಲಿ ರಾಮನಾಮ !
ಬರಲಿ ರಾಮನಾಮ ಸದಾ ! ಬರಲಿ ಕೃಷ್ಣ ನಾಮ ||
ಸತತ ನಿನ್ನ ಚರಣಸೇವೆಯನ್ನು ಕೊಡೋ ರಾಮ || ಸದಾ ಎನ್ನ ||
ನಿನ್ನ ನಾಮ ನೆನೆವುದಕ್ಕೆ ! ಎನಸೆ ಮನಸೆ ಮನವ ನೀಡೋ ||
ನಾ ನಿನ್ನ ನಂಬಿದೆ ಶ್ರೀರಾಮ ! ಎನ್ನ ಕಾಯೋ || ಸದಾ ಎನ್ನ ||

ಅನಂತೇಶ್ವರ ಚಂದ್ರಮೌಳೀಶ್ವರ ||
ಬಂದ ಬವಣೆಯೆಲ್ಲ ಪರಿಹರಿಸೈ ತಂದೆ ||
ಬಂಧುಬಾಂದವ ಗುರುಹಿರಿಯನು ನೀನೇ
ಸಂದೇಹವಿಲ್ಲದೆ ಪೊರೆಯೊ ಶಿವನೆ || ಅನಂತೇಶ್ವರ ||

ಇಂದುವಾರದಿ ಬಂದ ಭಕ್ತ ಜನರು ಎಲ್ಲ |
ನಿಂದು ನಿನ್ನಯ ಮುಂದೆ ಪ್ರಾರ್ಥನೆಯನೆಸಗಲು !
ಬಂದೊದಗಿದ ದುರಿತವೃಂದವ ಹರಿಸುತ
ಎಂದೆಂದಿಗೂ ಮನದಿಂಗಿತವೀಯುವ || ಅನಂತೇಶ್ವರ ||

ಇಂದುಕಳಾಧರ ಶಿವಶಂಭೋಶಂಕರ !
ಇಂದಾದಿಪ್ರಿಯ ಜಯ ನಾಗಭೂಷಣ |
ಚಂದದಿ ನಮ್ಮನು ಪೊರೆಯೊ ನಟವರ
ಕುಂದುಗಳೆಲ್ಲ ಮನ್ನಿಸು ಶಶಿಧರ ||ಅನಂತೇಶ್ವರ||

ಪಾಲಿಸಮ್ಮ ಮುದ್ದು ಶಾರದೆ ! ಎನ್ನ !
ನಾಲಿಗೆಯಲ್ಲಿ ನಿಲ್ಲಬಾರದೇ ||ಪಲ್ಲ||

ಲೋಲಲೋಚನೆ ತಾಯೆ ನಿರತ ನಂಬಿದ ನಿನ್ನ ||ಪಾಲಿ||
ಅಕ್ಷರಕ್ಷ ವಿವೇಕೂ ! ನಿನ್ನ ! ಕುಕ್ಷಿಯೊಳೀರೇಲ್ಲು ಲೋಕವ !
ಸಾಕ್ಷಾತ್ ರೂಪದಿಂದ ಒಲಿದು ರಕ್ಷಿಸು ತಾಯೆ ||ಪಾಲಿ||
ಶೃಂಗಾರಪುರ ನೆಲೆವಾಸಿನೀ ! ದೇವಿ ! ಸಂಗೀತಗಾನವಿಲಾಸಿನೀ !
ಮಂಗಳಗಾತ್ರಳೆ ಭಳಿರೆ ಬ್ರಹ್ಮನ ರಾಣಿ ! ಪಾಲಿ |

ಸರ್ವಾಲಂಕಾರ ದಯಾಮೂರುತೀ ! ನಿನ್ನ ಚರಣವನುತಿಸುವೆ ಕೀರುತಿ
ಗುರುಮೂರ್ತಿ ಪುರಂದರ ವಿಠಲನ್ನ ಸುತ್ತಿಸುವ | ಪಾಲಿ |
ಗುಮ್ಮನ ಕರೆಯದಿರೆ | ಅಮ್ಮ ನೀನು | ಗುಮ್ಮನ ಕರೆಯದಿರೆ !ಪ |
ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು | ಅಮ್ಮ ಉಣ್ಣುತೇನೆ ಅಮ್ಮ |
ಅಳುವುದಿಲ್ಲ | ಅ. ಪ. |

ಹೆಣ್ಣುಗಳಿಗಿರುವಲ್ಲಿಗೆ | ಹೋಗಿ ಅವರ | ಕಣ್ಣು ಮುಚ್ಚುವುದಿಲ್ಲವೆ । ಚಿಣ್ಣರ
ಬಡಿಯೆನು ಅಣ್ಣನ ಬೈಯೆನು । ಬೆಣ್ಣೆಯ ಬೇಡೆನು
ಮಣ್ಣು ತಿನ್ನುವದಿಲ್ಲ || ೧ ||

ಬಾವಿಗೆ ಹೋಗೆ ಕಾಣೆ | ಅಮ್ಮ ನಾನು | ಹಾವಿನೊಳಾಡೆ ಕಾಣೆ |
ಆವಿನ ಮೊಲೆಯೂಡೆ | ಕರುಳುಗಳ ಬಿಡೆ ನೋಡಿ | ದೇವತೆ ಬಂದು
ತಾವಿಗೆ ಕೊಡುವೆ | ೨ |

ಮಂಗನ ಮಾತನು ಕೇಳುತ | ಗೋಪಿದೇವಿ | ಮುಗುಳುನಗೆಯು ನಗುತ |
ಜಗದೊಡೆಯ ಶ್ರೀ ಪುರಂದರವಿಠಲನ | ಬಿಗಿದಪ್ಪಿಕೊಂಡಳು ।
ಮೋಹದಿಂದಾಗ | ೩ |

ಸಾಹಿತ್ಯ : ಚಿ॥ ಉದಯಶಂಕರ್
ಸಂಗೀತ : ಇಳೆಯರಾಜ
ಕಂಠದಾನ ; ಇಳೆಯರಾಜ

ಹೊನ್ನಿನ ತೇರಿನಲಿ ಬಾಸ್ಕರನು ಬರುತಿರುವಾಗ ಬೆಳ್ಳಿಯ
ಬೆಳಕನ್ನು ಬಾನಿಂದ ಚೆಲ್ಲಿರುವಾಗ !
ಬಾನಾಡಿ ಬಾನೆಡೆಗೆ ಗರಿಬಿಚ್ಚಿ ಹಾರುತಿದೆ ಇಂಪಾಗಿ ಸೊಗಸಾಗಿ
ಚಿಲಿಪಿಲಿ ಎನ್ನುತಿದೆ !
ಬಳ್ಳಿಯ ಹೂ ಅರಳಿ ಕಂಪನು ಚೆಲ್ಲುತಿದೆ ಪಾದಗಳ ಪೂಜಿಸಲು
ಕಾತರದಿ ಕಾಯುತಿದೆ |
ಮಂತ್ರಗಳು ಕೇಳುತಿವೆ ವಾದ್ಯಗಳು ಮೊಳಗುತಿವೆ ತುಪ್ಪದ
ದೀಪಗಳು ಸಾಲುಗಳು ಬೆಳಗುತಿವೆ |
ನೂರಾರು ಕಣ್ಣುಗಳು ದರುಶನವ ಬಯಸುತಿವೆ ನೂರಾರು
ಮನಸ್ಸುಗಳು ಹಾತೊರೆದು ಕೂಗುತಿವೆ |
ಕಾಮಾಕ್ಷಿ, ಮೀನಾಕ್ಷಿ, ಜಲಜಾಕ್ಷಿ, ಹರಿಣಾಕ್ಷಿ ಜಗದಂಬೆ,
ಭ್ರಮರಾಂಬೆ, ಮೂಕಾಂಬಿಕೆ ತಾಯೆ |
ಕಣ್ ತೆರೆದು ಹರಸು, ಕೈಹಿಡಿದು ನಡೆಸು |

ಸಾಹಿತ್ಯ : ಚಿ॥ ಉದಯಶಂಕರ್
ಸಂಗೀತ : ಇಳೆಯರಾಜ
ಕಂಠದಾನ : ಇಳೆಯರಾಜ

ತಾಯೇ ನೀನು ಬಂದಿಲ್ಲಿ ನೆಲಸಿ
ಈ ಕೊಲ್ಲೂರು ಕೈಲಾಸವಾಯ್ತು
ಪೂಜಿಸಿ ಜನ್ಮ ಸಾರ್ಥಕವಾಯ್ತು ||

ನಿನ್ನ ಪಾದವ ತೀರ್ಥ ಹರಿವ ನೀರೆಲ್ಲಾ
ನೀ ಮುಡಿದ ಸುಮವೆ ಇಲ್ಲಿ ಹೂವೆಲ್ಲಾ
ಒಂದೊಂದು ಹಿಡಿ ಅನ್ನ । ಅನ್ನಪೂರ್ಣೆಯ ದಾನ ।
ಈ ಭಾಷೆ ಲೋಕದಲ್ಲಿ ಇನ್ನೆಲ್ಲು ಇಲ್ಲಿ ||

ಆಡುವಮಾತಲ್ಲಿ ನಿನ್ನ ನಾಮವಿರಲಿ
ಹಾಡುವ ಹಾಡಲ್ಲಿ ಭಕ್ತಿ ತುಂಬಿರಲಿ
ಕನಸಲ್ಲಿ ಮನಸಲ್ಲಿ ನನ್ನೆರಡು ಕಂಗಳಲ್ಲಿ |
ಈ ನಿನ್ನ ರೂಪ ಎಂದೆದು ನಿಲ್ಲಲಿ ||

ಸಾಹಿತ್ಯ : ಚಿ|| ಉದಯಶಂಕರ್
ಸಂಗೀತ : ಇಳೆಯರಾಜ
ಕಂಠದಾನ : ಇಳೆಯರಾಜ

ಅಮ್ಮಾ | ಎಂದು ಕೂಗಿದರೆ ಮೈ ನವಿರೇಳುವುದು |
ಅಮ್ಮಾ ಎಂದು ಹಾಡಿದರೆ ಮನವೇ ಕುಣಿಯುವುದು |

ಏನು ಮಾಯೆಯೊ ತಾಳೆನು ತಾಯೆ
ಏನು ಮೋಡಿಯೊ ಅರಿಯೆನು ತಾಯೆ !

ಮರೆಯಲಾರೆ ನಿನ್ನ | ಆ ಸುಂದರ ಮೊಗವನ್ನ |
ಮನ ಸೆಳೆಯುವ ಕಂಗಳೆನ್ನಾ | ಆ ಹೂನಗೆ ಚೆಲುವನ್ನಾ
ಸರ್ವ ಮುಗಳೆ | ಸರ್ವ ಶಕ್ತಿ ಮೂಕಾಂಬಿಕೆ |
ನಾ ನಿನ್ನ, ಅಮ್ಮಾ ಎಂದು ಕೂಗಿದರೆ ಮೈ ನವಿರೇಳುವುದು |
ಅಮ್ಮಾ ಎಂದು ಹಾಡಿದರೆ ಮನವೇ ಕುಣಿಯುವುದು |

ನಿತ್ಯ ನಿನ್ನನು ನೋಡುವ ಆಶೆ ನಿತ್ಯ ಸೇವೆಯ ಮಾಡುವ ಆಶೆ |
ಏನು ಮಾಡಲಮ್ಮಾ | ನಿನ್ನ ಹೇಗೆ ಬೇಡಲಮ್ಮಾ |
ನನ್ನ ಮೊರೆಯ ಲಾಲಿಸಮ್ಮಾ | ಬೇಗ ದರುಶನ ನೀಡಮ್ಮಾ |
ಪಾದ ಕಮಲಗಳ ಸೇವೆ ಜನುಮವ ಸಾರ್ಥಕಪಡಿಸಮ್ಮಾ |

ಕಂಠದಾನ : ಇಳೆಯರಾಜ

ಆನಂದ ಕಂಡೆ, ನಾನಿಂದು !
ಮಾತಿಗೆ ಸಿಕ್ಕೊದಲ್ಲ, ಹೇಳಲು ಬಾರದಲ್ಲ ||
ನಿನ್ನ ಕಾಣುವಾಸೆ ! ಬಹು ದಿನಗಳ ಬಯಕೆ !
ವರವ ನೀಡಿತು ಎಂದು ನನ್ನ ಹಿರಿಯರ ಹರಕೆ !
ಅಲೆದು ಬರುವ ನದಿಗೆ ಕಡಲು ಎದುರಾದಂತೆ !
ಹಸಿದ ಜೀವಿಗೆ ಅಮೃತ ಫಲವು ದೊರೆತಂತೆ ॥
ಹಗಲು ಜಾರದೇ ಇರಲಿ ! ಇರಳು ಮೂಡದೆ ಇರಲಿ |
ಕಾಲಚಕ್ರವು ಮುಂದೆ ! ಉರುಳದೇ ಇರಲಿ !
ತಾಯೇ ನಿನ್ನೆದುರಲಿ ಕೈಮುಗಿದು ನಿಂತಿರುವ ।
ಈ ಭಾಗ್ಯ ಎಂದೆಂದು ಹೀಗೆಯೇ ಇರಲಿ ॥

ಶ್ರೀ ಪುರಂದರದಾಸರ ಪದಗಳು

ಕಂಠದಾನ : ಡಾ॥ ಯಂ. ಬಾಲಮುರಳಿಕೃಷ್ಣ

ಆ....ನ....ನಾ....ತರನಾ....
ಸತ್ಯವಂತರಿಗಿದು ಕಾಲವಲ್ಲ !
ದುಷ್ಟ ಜನರಿಗಿದು ಸುಭೀಕ್ಷ ಕಾಲ ||
ಹರಿಸ್ಮರಣೆ ಮಾಡುವಗೆ ಕ್ಷಯವಾಗುವ ಕಾಲ
ಪರಮ ಪಾಪಿಗಳಿಗೆ ಸುಭೀಕ್ಷಕಾಲ
ಸ್ಥಿರವಾದ ಪತಿವ್ರತೆಯು ಪರಮ ನಿಂದಿಪ ಕಾಲ ।
ಧರಗೆ ಜಾರೆಯೊಳ ಕೊಂಡಾಡುವ ಕಾಲ ||

ಉಪಕಾರ ಮಾಡಿದರೆ ಅಪಹರಿಸುವ ಕಾಲ |
ಸಕಲವು ತಿಳಿದವಗೆ ದುರ್ಭಿಕ್ಷಕಾಲ
ಪತ್ರಿಸುತರು ಎಂಬುವರ ನಂಬಲರಿಯದ ಕಾಲ
ಸಟೆಯಲ್ಲವಿದೆ ಆಪರೀತ ಕಾಲ |

ಧರ್ಮ ಮಾಡುವಗೆ ನಿರ್ಮೂಲವಾಗುವ ಕಾಲ |
ಕರ್ಮಪಾತಕರಿಗೆ ಬಹು ಸೌಖ್ಯ ಕಾಲ |
ನಿರ್ಮಲಾತ್ಮಕ ಸಿರಿ ಪುರಂದರ ವಿಠಲನ ॥
ಮರ್ಮದೊಳು ಬಜಿಸಲರಿಯದ ಕಾಲವಯ್ಯಾ |

ಕಂತದಾನ ; ಡಾ|| ಯಂ ಬಾಲಮುರಳಿಕೃಷ್ಣ

ನ........ನಾ.........ನಾ..........ಕೃಷ್ಣ ಎನಬಾರದೆ !
ಕೃಷ್ಣನ ನೆನೆದರ | ಕಷ್ಟವಂದಿಪ್ಪಿಲ್ಲ |
ನರ ಜನ್ಮ ಬಂದಾಗ ॥ ನಾಲಿಗೆ ಇದ್ದಾಗ | ಕೃಷ್ಣ ಎನಬಾರದೆ
ದಾರಿಯ ನಡೆವಾಗ| ಭಾರವ ಹೊರುವಾಗ | ಕೃಷ್ಣ ಎನಬಾರದೆ
ಗಂಧವ ಪೂಸಿ| ತಾಂಬೂಲವ ಮೊಲವಾಗ | ಕೃಷ್ಣ ಎನಬಾರದೆ
ಮಂದಗಮನೆ ಕೂಡ ! ಆಡುತಲೂ ಒಮ್ಮೆ! ಕೃಷ್ಣ ಎನಬಾರದೆ
ಕಂದನ ಬಿಗಿದಪ್ಪಿ | ಮುದ್ದಾಡುತಲೊಮ್ಮೆ ! ಕೃಷ್ಣ ಎನಬಾರದೆ
ಗರುಡವಾಹನ ಸಿರಿ | ಪುರಂದರ ವಿಠಲನೇ | ಕೃಷ್ಣಾ ಎನಬಾರದೆ

ಕಂತದಾನ : ಡಾ|| ಯಂ ಬಾಲಮುರಳಿ ಕೃಷ್ಣ

ಹಾ........ಆ........ಅನುಗಾಲವು ಚಿಂತೆ !
ಜೀವಕೆ ಮನವು ಶ್ರೀ ರಂಗನೊಳು ಮುಳುಗುವ ತನಕ ||

ಸತಿ ಇದ್ದರೂ ಚಿಂತೆ | ಸತಿ ಇಲ್ಲದೆ ಚಿಂತೆ !
ಪತಿಹೀನ ಸತಿಯು | ಆದರೂ ಚಿಂತೆ |
ಪೃಥ್ವಿಯೊಳಗೆ ಸತಿ ಕಡು ಚೆಲುವೆಯಾದರೆ !
ಮಿತಿ ಮೊದಲಿಲ್ಲದ ಮೋಹನ ಚಿಂತೆ !
ಬಡವನಾದರೂ ಚಿಂತೆ ಬಲ್ಲಿದನಾಗೆ ಚಿಂತೆ |
ಹಿಡಿಯೊನು ಕೈಯಾಳು ಇದ್ದರೂ ಚಂತೆ !
ಪೊಡವಿಯೊಳಗೆ ನಮ್ಮ ಪುರಂದರ ವಿಠಲನ |
ಬಿಡದೆ ಧ್ಯಾನಿಸು ಚಿಂತೆ ನಿಶ್ಚಿಂತೆ |

ಕಂಠದಾನ ಃ ಡಾ॥ ಯಂ ಬಾಲಮುರಳಿಕೃಷ್ಣ

ಆ................

ಏನೆ ಬರೆದೆಯೊ ಬ್ರಹ್ಮ
ನಿನೇಷ್ಟು ನಿರ್ಧಯನೊ
ಅಭಿಮಾನವನು ತೊರೆದು
ಪರರನು ಬೇಡುವುದು ॥
ಗೇಣೊಡಲು ಪೊರೆವುಕೆ ಪೋಗಿ
ಪರರನು ಪಂಚ ಬಾಣ
ಸಮರೂಪ ನೀನೆಂದು ಪೊಗಳಿ |
ಆಣೆ ನಿಣ್ಣಾಣೆ ಇಲ್ಲ ನಾಳೆ ಬಾರೆಂದೆನಲು
ಗಾಣ ತಿರುಗುವುದ ಎತ್ತಿನಂತೆ ಬಳಲುವ |
ಹಿಂದೆ ಬರುವ ಹೇಗಾದರಾಗಲಿ
ಮುಂದೆನ್ನ ವಂಶದಲಿ ಜನಿಸುವರ ಕಾಯೊ
ಪುರಂದರ ವಿಠಲ ಕಂದರ್ಪ ಜನಕ |
ಉಡುಪಿ ಶ್ರೀ ಕೃಷ್ಣನ ಆಣೆ |

ಕಂಠದಾನ : ಡಾ|| ಯಂ ಬಾಲಮುರಳಿಕೃಷ್ಣ

ಹರಿ... ....ನಾ....ನಾನಾ....ತರರೀನಾ
ಈ ಪರಿಯ ಸೊಬಗು ಇನ್ನಾವ ದೇವರಲಿ ಕಾಣೆ
ಗೋಪಿ ಜನ ಪ್ರಿಯ ಗೋಪಾಲಗಲದೆ |
ಪಾವನತ್ವದಿ ನೋಡೆ ಅಮರ ಗಂಗಾಜನಕ |
ದೇವತ್ವದಲಿ ದೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕ ಮೋಹಕನಯ್ಯಾ |
ಆವ ಧೈರ್ಯದಿ ನೋಡೆ ಅಸುರಾಂತರ |
ಗಗನದಲಿ ಸಂಚರಿಪ ಗರುಡದೇವನೆ ತುರಗ
ಜಗತೀಧರಶೇಷ ಪರಿಯಂಕ ಶಯನ |
ನಿಗಮ ಗೋಚರ ಪುರಂದರ ವಿಠಲಗಲ್ಲದೆ
ಮಿಗಿಲಾದ ದೈವಗಳಿಗೆ ಈ ಭಾಗ್ಯ ಉಂಟೇ !

ಕಂಠದಾನ : ಡಾ|| ಯಂ. ಬಾಲಮುರಳಿಕೃಷ್ಣ

ಆ...............

ನಿಂದಕರಿಸಬೇಕು |

ಹಂದಿ ಇದ್ದರೆ ಕೇರೆ ಹೇಗೆ ಶುದ್ಧಿಯು ಹಾಗೆ
ಅಂದಂದು ಮಾಡಿದ ಪಾಪವೆಂಬ ಮಲ ತಿಂದು ಹೋಗುವರಯ್ಯ ನಿಂದಕರು !
ವಂದಿಸಿ ಸ್ತುತಿಸುವ ಜನರೆಗರು ನಮ್ಮ ಒಂದಿಗೆ ಪುಣ್ಯವನು ಒಯ್ಯುವರಯ್ಯಾ||
ದುಷ್ಟ ಜನರು ಈ ಸೃಷ್ಟಿಯೊಳಿದ್ದರೆ ಶಿಷ್ಟ ಜನರಿಗೆಲ್ಲಾ ಕೀರ್ತಿಗಳು !
ಇಷ್ಟಪ್ರದ ಶ್ರೀ ಕೃಷ್ಣ ನಿನ್ನೊಳು ಇಷ್ಟವರವನು ಬೇಡುವೆನಯ್ಯಾ |
ದುರುಳ ಜನಂಗಳು ಚಿರಕಾಲ ಇರುವಂತೆ ಕರವ ಮುಗಿದು ವರ ಬೇಡುವೆನು |
ಪರಿಪರಿ ತಮಸಿಗೆ ಗುರಿಯು ಇಲ್ಲದೆ ಪರಮ ದಯಾನಿಧೇ ಪುರಂದರ ವಿಠಲ |

ತದಾನ : ಡಾ || ಎಂ. ಬಾಲಮುರಳಿಕೃಷ್ಣ

ತರರಿನಾ....ನಾ....ನಾ.....,,
ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ |
ನಾರಿಯೋ | ಧಾರಿಣಿಯೋ ! ಬಲುಧನದ ಸಿರಿಯೋ !
ಅನ್ಯರಲ್ಲಿ ಜನಿಸಿದ ಅಂಗನೆಯು ಕರೆತಂದು |
ತನ್ನ ಮನೆಗೆ ಅವಳ ಯಜಮಾನಿ ಎನಿಸಿ |
ಭಿನ್ನವಿಲ್ಲದ ಅರ್ಧ ದೇಹ ಎನಿಸುವ ಸತಿಯು |
ಕಣ್ಣಿನಲ್ಲಿ ನೋಡಲು ಅಂಜುವಳು ಕಾಲ ವಸದಿ |
ಮುನ್ನ ಶತಕೋಟಿ ರಾಯರುಗಳಾಳಿದ ನೆಲವ
ತನ್ನದೆಂದೆ ಶಾಸವನ ಬರಸಿ !
ಭಿನ್ನಣದ ಮನೆ ಕಟ್ಟಿ ಕೋಟಿ ಕೊತ್ತಳವಿಕ್ಕಿ
ಚಿನ್ನಿಗನ ಅಸುಗಳಿಗೆ ಹೊರಗೆ ಹಾಕುವರು !
ಅಸ್ತಿರದ ದೇಹವಿದು ನೆಚ್ಚಿ ನೀ ಕೆಡಬೇಡ
ಸಸ್ತದಲಿ ನೆನೆ ಕಂಡ್ಯ ಹರಿಪಾದವ ಚಿತ್ತದೊಳು !
ಸುದ್ದಿಯಿಂ ಪುರಂದರ ವಿಠಲನೇ ಉತ್ತಮೋತ್ತಮ ಎಂದು
ಸುಖಿಯಾಗು ಮನುಜ |

ಕಂತದಾನ : ಡಾ|| ಎಂ. ಬಾಲಮುರಳಿಕೃಷ್ಣ
ಹೊಡಿ ನಗಾರಿ ಮೇಲೆ ಕೈಯು |
ಗಡಗಡ ಹೊಡಿ ನಗಾರಿ ಮೇಲೆ ಕೈಯು |
ಧೃಡ ವಂದ್ಯನ ಪಾದ ಬಿಡದೆ ಬಜಿಪ ರಾಗ |
ಬಿಡಿಸಿ ಪೊರೆವ ಜಗದೊಡೆಯನೆ ಪರನೆಂದು |

ವೇದ ಗಮ್ಯ ಸಕಲಾರ್ಥಿನಿ ವಾರಕ |
ಮೊದವೀವ ಮಧುರೊದನ ಪರನೆಂದು |

ಗಾನಲೋಲ ತನ್ನ ಧ್ಯಾನಿಸುವರನೆಲ್ಲಾ
ಮಾನದಿಂದಲೆ ಕಾಯ್ವ ಶ್ರೀನಿಧಿ ಪರನೆಂದು |
ಈ ಪ್ರಕೃತಿಯೊಳು ವ್ಯಾಪಕನಾಗಿಹೆ
ಶ್ರೀ ಪತಿ ಪುರಂದರ ವಿಠಲನೇ ಪರನೆಂದು |

ಕಂಠದಾನ : ಡಾ|| ಎಂ ಬಾಲಮುರಳಿ ಕೃಷ್ಣ

ಹಾ........ಹಾ........ಆ........ಆ........ಆ
ಏನು ಮಾಡಿದರೇನು ಭವ ಹಿಂಗದು | ೪
ದಾನವಂತಕ ನಿನ್ನ ದಯೂವಾಗದ ತನಕ |

ಶ್ರುತಿ ಶಾಸ್ತ್ರ ಪುರಾಣಗಳ ನೋಡಿ ಬೆಂಡಾದೆ | ೩
ಅತಿ ಶೀಲಗಳನ್ನೆಲ್ಲಾ ಮಾಡಿ ದಣಿಸಿ !೨
ಗತಿ ಪಡೆವೆನೆಂದು
ಕಾಯ ನಂದಿಸಿದೆನೂ
ರತಿ ಪತಿ ಪಿತ ನಿನ್ನ ದಯಪಾದಗ ತನಕ |
ಧ್ಯಾನವನು ಮಾಡಿದೆನು ಮೌನವನು ತಾಳಿದೇ !
ಮಹಾ ಪುರುಷಾರ್ಥಕೆ ಮನವನಿಕ್ಕಿ
ಅನಾಥ ಬಂಧು ಶ್ರೀ ಪುರಂದರ ವಿಠಲನ
ಧ್ಯಾನಿಸುವರಗೂಡಿ ನೆಲೆಗಾಣುವ ತನಕ

ಸಗ ಮದ ನಿಸ ಏನು ಮಾಡಿದರೇನು
ಗಮದನಿಸ ಏನು ಮಾಡಿದರೇನು
ಮದನಿಸ, ಪನಿಸ, ನಿಸ, ಏನು ಮಾಡಿದರೇನು |

ಮುರಳೀ ಗಾನ ಕನ್ನಡ

ಎಂಥ ಮಹಿಮೆ ಇದೆಯದೊ ಈ ಮುರಳಿಲೀ
ಅಂಥ ಇಂಪು ಎಲ್ಲಿಯದೊ ಆ ಧ್ವನಿಯಡೇ

ನೂರಾರು ಸ್ವರಗಳನು ಶ್ರೀ ಕೃಷ್ಣನು ನುಡಿಸಲು
ಅತಿಯಾದ ಆನಂದವೆ ಮೇರೆ ಮಿರಿತು
ಎಂಥ ಮಹಿಮೆ..............

ಜೀವಿಗಳ ಮುಗ್ಧರನು ಮಾಳ್ಪ ದಿವ್ಯ ನಾದವಿದು
ಚರಾಚರಾತ್ಮಕ ಸೃಷ್ಟಿಯ ನಡೆಸುವ ಸಂಗೀತವಿದು
ಎಂಥ ಮಹಿಮೆ..............

ಬಿದಿರ ತುಂಡಿಗೆ ಯಾರು ಈ
ವೇದಸ್ವರನು ಇತ್ತರೋ
ಮಧುರ ವಂಶಿಗೆ ಯಾರು ಈ
ಮಂತ್ರಾಕ್ಷರವ ಕೊಟ್ಟರೋ
ಎಂಥ ಮಹಿಮೆ.............

ಒಂದು ಬಾರಿ ಕೇಳಿದರೆ ದೊರೆವುದು ಆ ಕೈವಲ್ಯ
ಮುರಳೀ ಗಾನವ ನಾಲಿಪುದೆ
ನರಜನ್ಮಕೆ ಸಾಫಲ್ಯ
ಎಂಥ ಮಹಿಮೆ............—

ಹಾಡಿದವರು : ಡಾ || ಬಾಲಮುರಳೀಕೃಷ್ಣ
ಮುರಳೀಯೇ ಮುರಳಿಯೇ
ಗಾನವ ಹಾಡುವ ವೇಣವೇ
ಮೋಹನ ಕೃಷ್ಣನ ಮುದ್ಧಿನ ತುಟಿಯಲಿ
ಹೊಮ್ಮುವ ನಾದಸ್ವರವೇ
ಮುರಳಿಯೇ...............

ಲೋಕವನ್ನಾಡಿಪ ಜಡತೆಯನ್ನೋಡಿಪ
ವಿರಾಮವಿಲ್ಲದ ಸರಾಗ ಲಹರಿ
ಆ ಬಾಲಗೋಪಾಲ ಆನಂದ ತಂದಿದೆ
ಪ್ರತಿಕ್ಷಣವ ಸುಮಧುರವು ಮಾಡುತಿಹೆ
ಮುರಳಿಯೇ...............

ಪ್ರಾಣ ವಾಯುವೆ ಆಯುವದು
ನಾದೋಪಾಸನೆ ಮಾಡುತಿಹೆ
ರಾಗ ಸಾಧನೆಗೆ ಯೋಗವಿದು
ರಸಗಾನವ ಹಾಡುತಿಹೆ
ಆಲಾಪನೆ ಬಿಟ್ಟು ಅನ್ಯವರಿಯೆನು
ಅಜರನುನಾ ಅಮರನು ನಾ ಆಗುವೆನು
ಮುರಳಿಯೇ...............

ಮರವು ಗಿಡವು ನೋಡು ನದಿಯು ಝರಿಯು ಪ್ರೊಂಗೆ
ಹೊಮ್ಮಿತು ಮೋಹನರಾಗಲಿ
ಸ್ವರವೆ ನಿಲ್ಲುವೆಲ್ಲ ಧ್ವನಿಸಲಂತದು
ಪ್ರಣವವನು ಪ್ರಾಣವನು ಹಾಡಿದೆಯೊ
ಮುರಳಿಯೇ...............

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ಗೋಪಾಲಕೃಷ್ಣ ಬಂದ ನೋಡು
ಮಿಂಚಂತಹ ಬೆಳಕನು ತಂದ ನೋಡು
ಮುರಳಿಯನ್ನು ಹಿಡಿಯುತಲಿ
ನವಿಲು ಗರಿಯ ಧರಿಸುತಲಿ
ಗೊಲ್ಲಕುಲವ ಬೆಳಗುತಾ ಶುಭವ ತಂದ ನೋಡು
ಗೋಪಾಲ ಕೃಷ್ಣನು.....................

ಕದ್ದು ಬೆಣ್ಣೆ ಮೊದ್ದೆಯನು ಮೆದ್ದು ಲೀಲೆ ಮೆರೆದನು
ಮಣ್ಣು ಮೆದ್ದು ಬಾಯಿಯಲಿ ಮೂರು ಜಗದ ತೋರ್ದನು
ನೀಲ ಮೇಘ ಶ್ಯಾಮನು ಕಾಳಿ ಹೆಡೆಯ ತುಳಿದನು
ಕಡೆಗೋಲು ಕೃಷ್ಣನು ಬಂದು ನೋಡು
ಗೋಪಾಲಕೃಷ್ಣನ....,......

ದುಷ್ಟರಾ ಇಕ್ಕಿ ಮೆಟ್ಟಿ ಜಗವನೀತ ಪೊರೆದು
ಚಂದದಿಂದ ಉಡುಪಿಯಲಿ ನಿಂದ ನೋಡು
ಮುಕ್ತಿ ಮಾರ್ಗವ ತೋರಿ ಸಿದ್ಧಿಯ ನೀಡುತ್ತ
ಮೋದದಿಂದ ಉಡುಪಿ ಕೃಷ್ಣ ನಿಲಿದ ನೋಡು
ಗೋಪಾಲಕೃಷ್ಣನು...................

ಈತನು ಇರುವಾ ತಾಣ ಅರಳಿರುವಾ ಹೂದೋಟ
ಇವನ ಅಡಿಯು ವೇದಗಳಿಗೆ ಕೊಡೆಯಂತೆ
ತನುವ ಸೊಗಸು ಮೋಡಗಳಿಗೆ ಮೆರುಗಿನಂತೆ
ಗೋಪಾಲಕೃಷ್ಣನು...................

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ಏತಕೋ ಕೃಷ್ಣಾ ನನ್ನ ಮುರಳಿಯಂತೆ
ತುಟಿಯ ಮೇಲೆ ಇರಿಸೇ ನೀ
ಮನದಲಿ ನಿಲಿಸಿ ನೀನೇ ತನುವ ಜಗವನೆ ತಿಳಿಸಿ
ಅಹಮಿನ ಬಿಡಿಸಿ ನಿನ್ನನೆ ಇಹವು ಪರವೆಂದು ಗ್ರಹಿಸಿ
ವೇಣುವೊಲು ಶೂನ್ಯನು ನಾನಾಗಿ ನಿಲುವೆನು
ನೀನೇ ಸಾರಾಗದಲ್ಲಿ ನುಡಿದಂಥೆ ಅದೇ ಹಾಡಿ ಪುಳಕಿಸುವೆನು
ಏತಕೋ ಕೃಷ್ಣಾ...............

ನಿನ್ನೊಡನೆ ಬೆರೆವಂಥ ಆಸೆಯು
ಮನವೆಲ್ಲ ನಿನ್ನದೆ ಧ್ಯಾನವು
ಸಾಯುಜ್ಯವ ದಯಪಾಲಿಪ ಮಹಿಮೆ ನಿನ್ನದು
ಈ ಬದುಕೆಲ್ಲಾ ಹಾಡಂತೆ ಸಾಗಲಿನ್ನದು
ಏತಕೋ ಕೃಷ್ಣಾ...............

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ವೇಣುಗಾನವೇ ಸಾಗಿಹುದು ಸಕಲ ಪ್ರಾಣಿಜಾಲ ಹೊಮಿಹುದು
ಅದು ಏನು ಮಾಯಾ ನಿಧಿ ವಿಧವಿಧ ರಾಗದಿ ಹೊಮ್ಮುಹುದು ಯಮುನಾನದಿ
ವೇಣುಗಾನವೇ............
ಮಂಜುಳ ನಾದದ ಕೃಷ್ಣನ ವೇಣು ಸಮ್ಮೋಹವನ್ನೇ ನೀಡುತಿದೆ
ಮಧುರಾ ನಿಲಯನ ಮಧುರಾಧರವದು ಮೂಲ ಮುರಳೀ ನಾದವ ನುಡಿ
ಸುತಿದೆ ವೇಣುಗಾನವೇ......
ಯೋಗಾನುಭವವು ಉಂಟಾಗಿದೆ ರಾಗಾನುಬಂಧವು ನೆಲೆಸುತಿದೆ
ಅಮೃತಾನು ಭೂತಿಗೆ ಅರ್ಥವಿದು ಅಕ್ಷರ ತತ್ವ ಅಕ್ಷಣವೆಂಬುದು
ವೇಣುಗಾನವೇ............

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ಹಾಡು ನೀ ಓ ಮುರಳೀ ಹಾಡು ನೀ ಓ ಮುರಳೀ
ತಿಳಿಸು ನೀ ದೇವನಲೀ ಈ ಮನವಿ ಹಾಡು ನೀ...........

ಯಾರೂ ಇಲ್ಲದ ಏಕಾಂತದಲಿ ಮುರಳಿ ನುಡಿವ ಸಮಯದಲಿ
ತುಟಿಯ ಮೇಲೆ ಮುನದಿ ನನ್ನ ಇರಿಸುವಂತೆ ನೀನು
ಈ ಬಿನ್ನಪವ ಕೃಷ್ಣನಿಗೆ ಬಿನ್ನವಿಸುವೆಯಾ ಹಾಡು ನೀ........

ಮರುಜನ್ಮದಲಿ ನಿನ್ನ ವಂಶದಿ ನನ ಜನನವಾಗಲೀ
ನನಗಾಸೆಯು ನೀನಿದನು ಸಲಿಸಲಾರೆಯಾ ಆಗೆನ್ನ ಕ್ಷಣವಾದರು ಅಧರದ
ಮೇಲೆ ನಿಲಿಸೆಂದು ಕೃಷ್ಣನಿಗೆ ನಿವೇದಿಸೆಯಾ ಹಾಡು ನೀ........

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ಹಾಡಿದ ಕೃಷ್ಣನು ಅಖಿಲ ಜಗವು ಅರಿಯಲು
ಮೋಹದಿಂದ ವನದಲಿ ರಾಸಲೀಲೆಯಾಡಲು
ರಾಗ ತಾಳ ಭಾವಗಳ ರಮ್ಯ ಕೇಳಿಯೂ
ವಿವಿಧ ನಾಟ್ಯಗತಿಗಳು ಭುವನವೆಲ್ಲ ಧ್ವನಿಸಿವೇ
ವೃಂದಾವನದಿ ಅಂದದಲಿ ವೇಣುವನೇ ಊದುತ
ಹಾಡಿದನು ಕೃಷ್ಣನು...........

ತರುಣಿ ನಡುವ ಬಳಸಿಹ ಮುರಲಿ ಲೋಲನು
ಸಕಲ ವಿಶ್ವವಂದ್ಯನು ಶ್ಯಾಮವರ್ಣನು
ವನಮಾಲಮ ಸಿರಿಲೋಲನು ಸುಂದರನು ದಪ್ಪಹರನು
ಹಾಡಿದ ಕೃಷ್ಣನು

ಪ್ರಕೃತಿಯೆಲ್ಲ ನಾವೆಯು ಅವನು ನಾವಿಕ
ವಿಶ್ವದಲ್ಲೆ ಆತನೋರ್ವ ಏಕೈಕ ರಕ್ಷಕ
ಪ್ರತಿಯೊಬ್ಬನು ಪರವಶದಲಿ ಭೇದಭಾವ ಮರೆಯುವ
ಚಿದಾನಂದಮೂರ್ತಿಯಲಿ ಲೀನವಾಗಿ ಹೋಗುವ

ಹಾಡಿದವರು : ಡಾ॥ ಬಾಲಮುರಳೀಕೃಷ್ಣ

ರಾಧಿಕಾ ರಾಧಿಕಾ ಕೃಷ್ಣ ರಾಧಿಕಾ ಕೃಷ್ಣಾ
ಹುಡುಕಿ ಹುಡುಕಿ ನಿನ್ನ ಸೇರೆ ಬಯಕೆಯೂ ರಾಧಿಕಾ..........
ಇರುಳೆಲ್ಲಾ ನಿನಗಾಗಿ ಕಣ್ಣನು ಮುಚ್ಚದೆ ಕಾದು ಯಮುನಾ ಪುಲಿನ ಸ್ಥಳದೀ
ಅರಸಿ ನೋಡಿ ಅಲಸಿಹೋದೆನು ರಾಧಿಕಾ..........
ಮುರಳಿ ಮೇಲೆ ಇರುವ ಒಲವು ನನ್ನ ಮೇಲೆ ಇಲ್ಲವೇ
ನವಿಲು ಗರಿಲಿ ಇರುವ ಕರುಣೆ ಭಕ್ತನಲ್ಲಿ ಬಾರದೇ
ರಾಧಿಕಾ——

ವಿರಹದಲೂ ನೋವಿನಲೂ ಆಸೆಯು ಭಾಮಿನಿ ಮೇಲೆ
ಮುಕ್ತಿಗೆ ಕರುಣೆ ಬೆರೆತು ಒಂದು ಸೇರಿ ಮರುಳುಗೊಳಿಪುದು

ಹಾಡಿದವರು : ಡಾ ॥ ಬಾಲಮುರಳೀಕೃಷ್ಣ
ಮಧುರವಾದ ನಿನ್ನ ಶುಭರೂಪ ಮನವ ತುಂಬುತ ಶೋಭಿಸಲಿ
ಸ್ವಪ್ನದಿ ಕೂಡ ಆನಂದಾಶ್ರುವು ಕ್ಷಣವೂ ತಡೆಯದೆ ಪ್ರವಹಿಸಲಿ
ಮಧುರವಾದ———

ಎದುರಿಗೆ ನಿಂತು ರೂಪವ ಕಂಡು ಏನನು ನುಡಿಯದೆ ಮೈ ಮರೆತೇ
ವೇಣುಗಾನವ ಕಿವಿಯಾರೆ ಕೇಳಿ ವಿವಶನಾದೆ ನಾ ತನ್ಮಯನಾದೆ
ಮಧುರವಾದ——

ನೀನು ನಾನೆಂಬ ಭೇದವ ಬಿಡಿಸು ನಿನ್ನನು ತಪ್ಪದೆ ಅನ್ಯವ ಮರೆರು
ದ್ವೈತಭಾವವು ಅದ್ವೈತವಾಗಲು ದಿವ್ಯಾನಂದವ ಹೊಂದುವೆ ಹಸರು
ಮಧುರವಾದ——

ಹಾಡಿದವರು : ಡಾ|| ಬಾಲಮುರಳೀಕೃಷ್ಣ

ವೃಂದಾವನದಲ್ಲಿ ನಂದ ನಂದನನ
ಮುರಳೀ ಗಾನವು ಮೊಳಗುತಿದೆ
ಪ್ರಭುವು ನುಡಿಯೆ ಮುರಳಿ ಧ್ವನಿಸಿತ್ತೈ ನನ್ನ ನೋಡಿ ರಾಧಿಕಾ
ಹರಿಯು ತನ್ನಲೇ ಇರುವ ವೇಣು ಊದಲೆಂದುಳು ಗೋಪಿಕಾ
ಜನವೆಲ್ಲ ಇದಕಾಗಿ ತಡೆದು ಮುರಳಿನಾದ ಕೇಳಿ ಸುಖಿಪರು
ವೃಂದಾವನದಲಿ———

ಈ ವಾದ ವೇದ ಸವಿಯುವರು ಸಂಗೀತ ಕೋವಿದರು
ಈ ಗಾನ ಧ್ಯಾನ ಅರಯುವರು ವೇದಾಂತವಿದರು
ಕಲರಾವವು ಇದು ಪುಲಕಿತಗೊಳಿಸಲು
ಬದುಕದು ಸಾರ್ಥಕ ಎನ್ನುವರು
ವೃಂದಾವನದಲಿ———

ಯಾರೊಬ್ಬರ ಸ್ವಂತವು ಅಲ್ಲವೂ
ಎಲ್ಲೆಡೆ ನೆಲೆಸಿದೆ ಸರ್ವವು ಆಗಿದೆ
ಯಾವೊಂದು ಎಂದಿಗೂ ಅಲ್ಲವು
ಸಕಲವು ನಿಖಿಲವು ಸಾಗುತ ಇದೆಯುದೊ
ಎಲ್ಲವು ತಾನೇ ಎಲ್ಲಿರಿಗೆ
ಆಲಾಪಿಸುವ ಶಬ್ದ ಬ್ರಹ್ಮವಿದು

ಶ್ರಿಂಗೇರಿ ಶಾರದಾಂಬೆಯು ಭಕ್ತಿಗೀತೆಗಳು

ಶೃಂಗೇರಿ ಶಾರದಾಂಬೆ ತಾಯಿ

ಹಾಡಿದವರು ಪಿ. ಸುಶೀಲಾ

ಶ್ರಿಂಗೇರಿ ಶಾರದಾಂಬೆ ತಾಯಿ, ವಿದ್ಯೆಯು ನೀಡಮ್ಮ ತಾಯೇ
ಸಾಹಿತ್ಯ ಸುದೆಯು ತೋರು ನೀನು
ಸಂಗೀತ ಗಂಗಾ ಲಹರಿ ನೀನು
ಶ್ರಿಂಗೇರಿ ಶಾರೆದಾಂಬೆ ತಾಯಿ,
ವಿದ್ಯೆಯು ನೀಡಮ್ಮ ತಾಯೇ

ವೀಣಾ ಪಾಣಿ ನೀ ರಂಘನ ರಾಣಿ
ಪುಸ್ತಕ ಧಾರಿಣಿ ಭವನ ಸ್ವರೂಪಿಣಿ
ಸುಜ್ಞಾನ ಜ್ಯೋತಿ ಪಚ್ಚಮ್ಮ
ಧರೆಗೆ ವಾಗ್ಯೆವಿ ಶರಣು ಶರಣು ಎಂಬೆ
ಪಾದಕ ನಮಗೆ ನೀಡು ಎಂಬೆ
ಶ್ರಿಂಗೇರಿ ಶಾರದಾಂಬೇ ತಾಯೇ
ವಿದ್ಯೆಯು ನೀಡಮ್ಮ ತಾಯೇ

ಕಾವ್ಯ ತರಂಗಿಣಿ ವೇತ ಮನರ್ಥಿನಿ
ಪಾಪ್ಯನಿವಾರಣಿ ಪುಣ್ಯ ಪ್ರವಾಹಿನಿ
ಸಂದೆಯು ನೆಲಿಯು ತೋರಮ್ಮ ನಮಗೆ
ಹರುಷದಿಯು ಶರಣು ಶರಣು ಎಂಬೆ
ಬುದ್ಧಿಯನು ನಮಗೆ ನೀಡು ಅಂಬೆ
ಶ್ರಿಂಗೇರಿ ಶಾದಾಂಬೆಯೋ ತಾಯೇ
ವಿದ್ಯೆಯು ನೀಡಮ್ಮ ತಾಯೇ

[illegible]

ಹಂಸ ವಾಹಿನಿ ಸುದನಿ ಸಂಜೀವಿನಿ

ಹೊಂಬೆಳಕಿನ ಹಾದಿಯು ತೋರಮ್ಮ
ನಮಗೆ ಶೊಬಾಂಗಿ ಶರಣು ಶರಣು
ಎಂಬೆ ಮತಿಯನ್ನು ನಮಗೆ
ತೋರು ಅಂಬೆ ಶ್ರಿಂಗೇರಿ ಶಾರದಾಂಬೆ
ತಾಯೋ ವಿದ್ಯೆಯನು ನೀಡು ಎಂಬೈ

ಭವ್ಯ ಮೂರುತಿ

ಗುರು-ಶ್ರೀ

ಭವ್ಯ ಮೂರುತಿ ಚಂದ್ರಶೇಖರನ ದಿವ್ಯ ದರುಷನದಿಂದ
ದಿವ್ಯ ದರುಷನದಿಂದ ನಾ ಧನ್ಯನಾದೇ ಕಾವ್ಯ ಶಾಸ್ತ್ರಗಳಪೊದಿ
ಬೆಸತ್ತು ಬಳಸರಲು ನವ್ಯ ನವಚೇತನ್ಯ ಆನಂದ
ಎನಗಾಯಿತು ಭವ್ಯ ಮೂರುತಿ ಗುರು ಶ್ರೀ ಚಂದ್ರಶೇಖರನ
ದಿವ್ಯ ದರುಷನದಿಂದ ನಾ ಧನ್ಯನಾದೆ ಬಸ್ಮಬೂಷಿತನಾಗಿ
ಕಾಶಾಯವನು ಧರಸಿ ವಿಸ್ಮಯದಲಿ ಲೀಲೆಗಳ ತೋರಿಸತ
ಕಶಲಾದಿಪ ದನಿಶ್ಚಿತ ಜ್ಞಾನದ ರಶ್ಮಿಯನು ಬೀರಿ
ನಿಶ್ಚಿಂತನಾಗಿರುವಂತ

ಭವ್ಯ ಮೂರುತಿ ಗುರು ಶ್ರೀ ಚಂದ್ರಶೇಖರನ
ದಿವ್ಯ ದರುಷನದಿಂದ ನಾ ಧನ್ಯನಾದೆ
ಶಿರಭೋಗ ಭಾಗ್ಯಗಳು ಸ್ಥಿರವಲ್ಲವೆಂದೆನುತ
ನರಜನ್ಮ ನಶ್ವರವು ಧರೆಯೊಳೆನುತ
ಮರಣ ಕಾಲಕೆ ಸಾಂಭನೊಬ್ಬನೆಗಾಗಿ ಎಂಬ ಅರಿವ ಶ್ರೀಧರ
ದಾಸಗಿತ್ತು ಪೊರೆದಂತ ಭವ್ಯ ಮೂರುತಿ ಗುರು ಶ್ರೀ
ಚಂದ್ರಶೇಖರನ ದಿವ್ಯ ದರುಷನದಿಂದ ನಾ ಧನ್ಯನಾದೆ

ಎಷ್ಟು ಕರುಣೆಯೋ

ಎಷ್ಟು ಕರುಣೆಯೋ ಭಕ್ತರೊಳು ಎಷ್ಟು ಪ್ರೇಮವೋಽಽ
ನಿಷ್ಟ ನಿರ್ಮಲ ರೂಪ ಸದ್ಗುರು ಽ ಚಂದ್ರಶೇಖರಽಽ ಭಾರತಿಶಿಖಿಗೆಽ
ಚಿತ್ತಶುದ್ಧರಾಗಿ ಬಳಿಗೆ ನಿತ್ಯ ಸಾರ ಬರುವ ಜನರ
ದಿತ್ತವರಿತುಕೃಪೆಯ ಮಾಡುವ ಸತ್ವ ಮೂರುತಿಽ
ಗುರುವರೆನೈರೆಗೆಽಽ ಎಷ್ಟು ಕರುಣೆಯೋ ಭಕ್ತರೊಳು ಎಷ್ಟು
ಪ್ರೇಮವೊ ನಿಷ್ಠ ಶುದ್ಧ ಬ್ರಹ್ಮಜ್ಞಾನವೆಂಬ
ಅದ್ವೈತಾಂಬರತ ತತ್ವವ
ವಿದ್ಯೆಯಿಂದ ಪೂಜೆ ಮಾಡಿಸಿದ್ಧರಾಗಿ ಮೇರೆಯೂವರೆಗೆ
ಎಷ್ಟು ಕರುಣೆಯೋ ಭಕ್ತರೊಳು ಎಷ್ಟು ಪ್ರೇಮವೋಽ
ಚಂದ್ರಶೇಖರ ಭಕ್ತಿಜ್ಞಾನದಿಂದ ನಿರಂತಯೂಕ್ತಾ ಕರ್ಮಗಳನು
ಗೈದು ಮುಕ್ತಿ ಪದಮತೋರಿ ಜೀವನ ಮುಕ್ತರಾಗಿ
ತೋರುವರೆಗೆ ಎಷ್ಟು ಕರುಣೆಯೋ ಭಕ್ತರೊಳು ಎಷ್ಟು
ಪ್ರೇಮವೋಽ ಎಷ್ಟು ಕರುಣೆಯೋ ಪ್ರೇಮವೋ ವೋಽ ವೋಽ

ವಂದೆ ಶ್ರೀ ಚಂದ್ರಶೇಖರ

ವಂದೇ ಶ್ರೀ ಚಂದ್ರಶೇಖರ ಆರತಿ ವರ ವೇಶಿ
ವಂದೇಽ ಇಂದುಗಳ ಪೂರ್ಣಂಮಾಂ ಆ ಆಽ ಆ ಹಾಽ ಹಾಽ
ಇಂದುಗಳ ಪೂರ್ಣಮಾಂ ಆನಂದ ಸಾಕ್ಯದಾಯಕವರ
ವಂದೇ ಶ್ರೀ ಚಂದ್ರಶೇಖರ ಆರತಿ ವರ ಕಿದೇಶಿಗಾಂ
ವೇದ ಧರ್ಮ ಪಾಲಕಮಾಂ ಸುಕ್ಷಾನ ಮಾರ್ಗಾದಿ ಪಕಮಾಂ
ನಾದ ಬಿಂದುಗಳ ದಿತರಂ ಆತನ ಜನಪಾನಕಂ
ವಂದೇ ಶ್ರೀ ಚಂದ್ರಶೇಖರ ಆರತಿ ವರ ವೇಶಿಗಾರಿ
ವಂದೇಽಽ ಆ ಆ ವಂದೇಽಽ

ಶಂಕರಾಚಾರ್ಯಪೀಠ ಸ್ವಾಂಧಿಂತ
ಕೃಪಾಕರಯುಂ

ಶ್ರೀ ರರಂಗರುದಾಸ ಹೃದಯು ವಾಸಿತಂ ಮನರೋಗಂ
ವಂದೇಽಽ ಶ್ರೀ ಚಂದ್ರಶೇಖರ ಆರತಿ ವರ ದೇಶಿಗಾರಿ
ವಂದೇಽಽ ಪರಿಗಪನಿನ ವಂಸೇ ರಿ, ಗ, ಪ, ನಿ, ನ, ಸ,
ವಂದೇಽಽ ಗರಿ, ಗದ, ಗರಿ, ಗರಿ. ವಂದೇಽ
ರಿಗಪ ರಿಗಪನಿಸ ಸಪನಿಸ ವಂದೇ ನಿ ರಿ ಗ ನಿ ರಿಪ ಸಪ್ತವಂದೇ
ಸರಿಗಪನ ನಗರಿ ವಂದೇ ಪಗ ರಿಗ ಸರಿ ಪಗ ರಿಗ ಒಂದೇ
ವಂದೇಽಽ ವಂದೇಽಽ ಪನಿಗ ನಿಜ ಗವನಿಗ ನಿಗ ಪಗ
ದಿಗ ಪಗ ಗಪ ನಿಪ ನಿಸಸ ವಂದೇಽ

……

ಜ್ಞಾನವ ನೀಡೆನಗೆ

ಜ್ಞಾನವ ನೀಡೆನಗೆಽಽ ಜ್ಞಾನವ ನೀಡೆನಗೆ ಗುರುವೇ ಜ್ಞಾನವ ನೀಡೆನಗೆ
ಅನತೆ ಜನಸಾರಕ್ಷಗ ಪ್ರಭುವೇ ನಾನು ನನ್ನದು ಎಂಬ
ವ್ಯಾಮೋಹಕೆ ಸಿಲುಕಿ ನಾನು ನನ್ನದು ಸಿಲುಕಿ ಧೀನನಾದೆನೋ
ಎನ್ನ ಕಾಯೋ ಯಾಸಿಥೆ ಜ್ಞಾನವ ನೀಡೆನಗೆ ಪರಮ ಧರ್ಮ
ಸಾಮ್ರಾಜ್ಯನು ಪಾಲನೆ ಪರಮಧಾಂಸ ಸರಸಿಂಹ ಸಂಜಾತನೆ
ವರಶ್ರಿಂಗಗಿರಿ ಪೂರನಿವಾಸನೆ ನಿರುಪಮ ಗುಣಶೀಲ ಸತ್ಯಸ್ವರೂಪನೆ
ಜ್ಞಾನವ ನೀಡೆನಗೆ ಗುರುವೇಽಽ ಸುಂದರ ಮುಖ ಶ್ರೀ ಶಾರದಾಂಬೇಯು
ವಂದಿಸಿ ಪೂಜಪ ನಿರ್ಮಲ ರೂಪನೆ ಚಂದ್ರಾ ಮೌಜಿಪ್ರಿಯು
ಪ್ರಣವ ಸ್ವರೂಪನೆ ಚಂದ್ರಶೇಖರ ಭಾರತಿ ಗುರುವೇ
ಜ್ಞಾನವ ನೀಡೆನಗೆ ಗುರುವೇ ಜ್ಞಾನವ ನೀಡೆನಗೆ

ಶರಣೆಂಬೆ ನಿನಗೆ

ಶರಣೆಂಬೆ ನಿನಗೆ ಕರುಣಾಗಲದೇ ವರ ಚಂದ್ರಶೇಖರ
ಭಾರತಿ ಗುರುವೇ ವರ ವೇದಾಂತ ಸಾರಾಮೃತವನ್ನು
ನಿರುತವು ನೀಡುವ ಕಾಮದೇನುವೇ ಶರಣಂಬೇ ನಿನಗೆ
ಕರುಣಾಗಲದೇ ತುಂಗಾ ತೀರದ ಶೃಂಗೆರಿಯಲಿ ಮಂಗಳಾಂಗಿ
ಶಾರದೇ ಸನ್ನಿಧಿಯಲ್ಲಿ ಸಂಗ ರಾಹಿತನಾಗಿ ಜ್ಞಾನಯೋಗದಿ
ಕಂಗೊಳಿಸುವ ನಿಜ ಪರಮಹಂಸನೆ ಬ್ರಹ್ಮಸಂಪದ
ಶೀಕರವನೇರಿ ಬ್ರಹ್ಮಸ್ವರೂಪನೆ ತಾನಾಗಿ, ಬ್ರಮ್ಹ ಸತ್ಯ
ಜಗಸಿಪೂವೆಂಬ ಇವರರು ಶ್ರೀಧರ ದಾಸಗೆ ಓದಿಸಿದೆವನೆ
ಶರಣೆಂಬೆ ನಿನಗೆ ಕರುಣಾಗಾಲದೇ ವರ ಚಂದ್ರಶೇಖರ
ಶರಣೆಂಬೆ ನಿನಗೆ ಶರಣೆಂಬೆ ನಿನಗೆ ಶರಣೆಂಬೆ ನಿನಗೆ
ಶರಣಾಗಲದೇ ವರ ಚಂದ್ರಶೇಖರ ಆರತಿ ಗುರುವೇ

* * *

ನಮ್ಮಮ್ಮ ಶಾರದೇ

ಹಾಡಿದವರು– ಡಾ|| ರಾಜ್‌ಕುಮಾರ್

ನಮ್ಮಮ್ಮ ಶಾರದೆ ಉಮಾಮಹೇಶ್ವರಿ ! ನಿನ್ನೊಳಗಿಹನಾರಮ್ಮ ||ಪ||
ಕಮ್ಮಗೋಲದ ವೈರಿಸುತನಾದ ಸೊಂಡಿಲ ! ಹೆಮ್ಮೆಯ ಗಣನಾಥನೆ ||ಅ ಪ||
ಮೋರೆ ಕಪ್ಪಿನ ಭಾವಮೊರದಗಲದ ಕಿವಿ ! ಕೊರೆದಾಡೆಯಿವನಾರಮ್ಮ
ಮೂರು ಕಣ್ಣಿನ ಸುತ ಮುರಿದಿಟ್ಟ ಚಂದ್ರನ ! ಧೀರ ತಾ ಗಣನಾಥನೆ ||೧||
ಉಟ್ಟ ಪಟ್ಟೆಯು ಬಿಗಿಗುಟ್ಟ ಚೆಲ್ಲಣದ ! ದಿಟ್ಟ ತಾನಿವನಾರಮ್ಮ ||
ಪಟ್ಟದ ರಾಣಿ ಪಾರ್ವತಿಯ ಕುಮಾರನು ! ಹೊಟ್ಟೆಯ ಗಣನಾಥನೆ ||೨||
ರಾಶಿವಿದ್ಯೆಯ ಬಲ್ಲ ರಮಣೀ ಹಂಬಲನೊಲ್ಲಿ ಭಾಟಿಗನಿವನಾರಮ್ಮ ||
ಲೇಸಾಕಿ ಜನರು [illegible] ! [illegible]ವದಾಸ ಕಾಣೆ ||೩||

ಇವಳೇ ವೀಣಾಪಾಣಿ

ಹಾಡಿವದರು– ಎಸ್. ಜಾನಕಿ

ಇವಳೇ ವೀಣಾ ಪಾಣಿ ! ತುಂಗಾ ತೀರ ವಿಹಾರಿಣಿ | ಶೃಂಗೇರಿಪುರ ವಾಸಿನಿ ||

ಶಾರದ ಮಾತೆ ಮಂಗಳದಾತೆ ಸುಸಂಸೇವಿತೆ । ಪರಮ ಪುನೀತೆ ವಾರಿಜಾಸನ ಹೃದಯ ವಿರಾಜಿತೆ । ನಾರದ ಜನನೀ ಸುಜನ ಸಂಪ್ರೀತೆ !

ಆದಿ ಶಂಕರ ಅರ್ಚಿತೆ ಮಧುರೇ ನಾದಪ್ರಿಯೇ ನಗುಮಣಿಯ ಹಾರೇ ದೇನ ಅಖಿಲಶಾಸ್ತ್ರ ಆಗಮ ಸಾರೆ ! ವಿದ್ಯಾದಾಯಿನಿ ಯೋಗ ವಿಚಾರೇ ।

ಶಾರದೇ ನೀ ನೋಡದೇ

(ಹಾಡಿದವರು : ಗಾನಗಂಧರ್ವ ಡಾ|| ರಾಜ್‌ಕುಮಾರ)

ಸಾಕಿ–ಯೋಗಿಗಳ ಹೃದಯದಲ್ಲಿ ಅನವರತ ವಾಸಿಸುವಾಗ
ಗಾಯಕರ ಕಂತದಲಿ ಮನೆ ಮಾಡಿ ಕುಳಿತಿರುವ
ಕವಿಯ ಮನವನು ಸೇರಿ ಕಲ್ಪನೆ ತರುತಿರುವ
ಶಾರದೆ ನೀನಿಲ್ಲದೇ ಈ ಅಂಧಕಾರವು ಕರಗಿಬೇಳಕಾಗದೇ
ಆ ಆ ಆ ಆ.......

ಹಾಡು–ಶಾರದೇ ನೀ ನೋಡದೇ ಅರವು ಅರುಳುವುದೇ
ಶಾರದೆ ನೀ ಹರಸದೇ ಬಾಳು ಬೆಳಗುವುದೇ ||ಶಾರದೆ||
ಶಾರದೇ ನೀ ಹರಿಸದೇ ನೀ ಆ ಆ ಆ....ಬಾಳುಬೆಳಗುವುದೆ
ಶಾರದೇ ನೀ ಒಲಿಯದೆ । ಕಲೆಯು ಒಲಿಯುವುದೇ
ಶಾರದೇ ನೀ ನಲಿಯದೇ ಸವಿಮಾತು ಕೇಳುವುದೇ ||ಶಾರದೆ||
ಶಾರದೇ ನೀ ನುಡಿಸದೇ ಆ ಆ ಆ ಆ....||ವೀಣೆ ನುಡಿಯುವುದೇ
ಶಾರದೇ ನೀ ಹಾಡದೇ । ಸಂಗೀತ ಕೇಳುವುದೇ
ಶಾರದೇ ಹಿಡಿಯದೇ । ಬೆಳಕು ಕಾಣುವುದೆ ||ಶಾರದೆ||

ಎಂಥ ಅಂದ ಎಂಥ ಚಂದ

ಎಂಥ ಅಂದ ಎಂಥ ಚಂದ ಶಾರದಮ್ಮ ನೀನು
ನಿನ್ನ ನೋಡಲೆರಡು ಕಣ್ಣು ನನಗೆ ಸಾಲದಮ್ಮ
ಇನ್ನೂ ಇನ್ನೂ ನೋಡುವಾಸೆ ತುಂಬಿತಮ್ಮ
ಇನ್ನೂ ಕೋಟಿ ಜನುಮ ಬರಲಿ ನನಗೆ ಸಾಲದಮ್ಮ
ಅಭಯ ಹಸ್ತ ನೋಡಿ ಜೀವ ಕುಣಿಯಿತಮ್ಮ । ನಿನ್ನ
ಪಾದ ಕಮಲದಲ್ಲಿ ಶಿರವು ಬಾಗಿತಮ್ಮ || ಎಂಥೆ
ಎಂಥ ಶಕ್ತಿ ನಿನ್ನ ನಿನ್ನಲ್ಲಿದೆಯೋ ಶಾರದಮ್ಮ
ನಿನ್ನ ನೋಡಿ ಹಾಡೊ ಆಶೆ ಬಂದಿತಮ್ಮ
ರತ್ನದಂಥ ಮಾತುಗಳನ್ನೆ ಆಡಿಸಮ್ಮ ||ಎಂಥ||
ರಾಗ ಭಾವ ಭಕ್ತಿ ತುಂಬಿ ಹಾಡಿಸಮ್ಮ
ಅಲ್ಲಿ ಇಲ್ಲಿ ಓಡೋ ಮನಸು ನನ್ನದಮ್ಮ
ಬೇಗ ಬಂದು ನೆಲಸು ಇಲ್ಲಿ ಶಾರದಮ್ಮ
ಬೇರೆ ಏನೂ ಬೇಕು ಎಂದು ಕೇಳೆನಮ್ಮ
ನನ್ನ. ವೀಣೆ ತಂತಿ ಮಾಡಿ ನುಡಿಸು ಶಾರದಮ್ಮ

……

ಏಕೆ ಈ ಮೌನ ತಾಯೆ

ಸಾ—ಶೃಂಗೇರಿಯಲಿ ದಿವ್ಯ ಜ್ಯೋತಿಯಾಗಿರುವ
ತಿಂಗಳಾ ಬೆಳಕಂತೆ ಕಂಗೊಳಿಸುತ್ತಿರುವಾಗ
ಕಂಗಳಲ್ಲಿ ಕಾರುಣ್ಯ ಜಲಧಿ ತುಂಬಿರುವ
ಶಂಕರಾಚಾರ್ಯರಿಗೆ ಒಲಿದು ಬಂದಾ ತಾಯೇ ಮೂಡಿದೇ
ಹಾಡು-ಏಕೆ ಮೌನವೇಕೆ॥ ತಾಯೇ ಮಾತಾಡೆಯೋಕೆ
ಹೇಳು ಈ ಮೌನವೇಕೆ||

ಆ ನಿನ್ನ ಕಂಗಳಲ್ಲಿ ವಾತ್ಸಲ್ಯ ತುಂಬಿದೆ ।
ತುಟಿಗಳಲ್ಲಿ ಸಸು ನಗೆಯೊಂದು ಸೊಗಸಾಗಿ ಮೂಡಿದೆ
ನಿನ್ನಂತರಂಗದಲ್ಲಿ ಏನಿದೆಯೋ ಕಾಣದೇ
ಇಲ್ಲಿಂದ ಹೋಗಲಾರೆ ನನ್ನಾಸೆ ತೀರದೆ ॥ಏಕೆ॥

ನನಗಾಗಿ ತಾಯೇ ಒಮ್ಮೆ ಮಾತಾಡಬಾರದೇ
ವಾಗ್ದೇವಿಯಾ ನುಡಿ ಕೇಳೆಬಾರದೇ
ಮನಸಾರೆ ನಿನ್ನ ಮಗನಾ ನೀ ಹರಸಬಾರದೇ
ದನಿಯೋಮ್ಮೆ ಕೇಳುವಾಸೆ | ದನಿಯೊಮ್ಮೆ ಕೇಳುವಾಸೆ
ಶೃಂಗೇರಿ ಶಾರದೇ ॥ಏಕೆ॥

ನೀ ಹರಿಸಿದಾಗ ಮೂಲಕ ಸಂಗೀತ ಹಾಡುವಾ ||
ಮತಿ ಹೀನ ಜ್ಞಾನಿಯು ಹೇಳುವಾ
ನಿನ್ನಿಂದ ತಾನೆ ಕವಿಯು ಬರೆಯುವದು ಕಾವ್ಯವಾ
ಅದನು ನಂಬಿ ಓಡಿ ಬಂದೆ । ಬಿಡೆ ನಿನ್ನ ಪಾದವ ॥

……

ಹೇಗೆ ಬೇಡುವುದೋ

ಹೇಗೆ ಬೇಡುವುದೋ ! ಏನು ಕೇಳುವುದೋ
ಒಂದು ಅರಿಯೆನಮ್ಮ ! ಮನದ ಸಂತೋಷಗೊಳಿಸು
ನಾನೇನು ಮಾಡಲಮ್ಮ ಶಾರದೇ । ಏನು ಮಾಡಲಮ್ಮ
ಹಾಲಾಭಿಷೇಕವ ಮಾಡುವೆನೆಂದರೆ । ಕರುವೆನ
ಹೂಗಳು ಪೂಜೆಯು ಸಂಜೆ ವೇಳೆಗೆ ಬಾಡಿ ಬಿಡುವಮ್ಮ
ದೀಪವ ಬೆಳಗುವನೆಂದರೆ । ನೀನೆ ಜ್ಞಾನ ಜ್ಯೋತಿಯಮ್ಮಾ
ಹಾಡುತ್ತ [illegible]ವೆನೆಂದರೆ । [illegible] ನಿನ್ನ ಭಿಕ್ಷೆಯಮ್ಮಾ

ನಿನ್ನಾ ಮನವ ಸಂತೋಷಗೊಳಿಸಿ ನಾನೇನು ಮಾಡಲಮ್ಮ
ಅಮೃತ ಸುರಿಸುವ ಮೇಘಕೆ ಲತೆಗಳು ಏನು ಕೊಡುವುದಮ್ಮ
ಉಸಿರನು ನೀಡುವ ಗಾಳಿಗೆ ಹಸಿರು । ಏನು ಕೊಡುವುದಮ್ಮ
ಚಂದ್ರಿಕೆ ಚೆಲ್ಲುವ ಶಶಿಗೆ ಚಕೋರಿಯು । ಏನು ಕೊಡುವುದಮ್ಮ
